# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 04, 2024

ಸಂಪುಟ : 51 ಸಂಚಿಕೆ : 171 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


ಚಿತ್ರ: ರಫೀಕ್, ಜನತಾವಾಣಿ



**ಹಬ್ಬ ಮುಗೀತು...** ಸರಣಿ ರಜೆಗಳೊಟ್ಟಿಗೆ ಆಗಮಿಸಿದ್ದ ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಮಿಂದೆದ್ದ ಜನತೆ, ಭಾನುವಾರ ವಾಪಾಸ್ ತಮ್ಮ ತಮ್ಮ ಊರು, ಕೆಲಸ ಮಾಡುವ ಸ್ಥಳಗಳತ್ತ ತೆರಳಿದರು. ಈ ಹಿನ್ನೆಲೆಯಲ್ಲಿ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಪ್ರಯಾಣಿಕರಿಂದ ತುಂಬಿತ್ತು. ಬಸ್ ಬರುತ್ತಲೇ ಸೀಟು ಹಿಡಿಯಲು ಪೋಷಕರು ತಮ್ಮ ಮಕ್ಕಳನ್ನು ಕಿಟಕಿ ಮೂಲಕ ಒಳ ನುಗ್ಗಿಸುತ್ತಿದ್ದ ಚಿತ್ರವಿದು.

# ಡಿಜಿಟಲ್ ವಂಚನೆ : ಬಂಧನ

**ಕರ್ನಾಟಕ, ತಮಿಳುನಾಡು ಸೇರಿದಂತೆ ಕೆಲ ರಾಜ್ಯಗಳಲ್ಲಿ 24 ನಕಲಿ ಕಂಪನಿಗಳನ್ನು ತೆರೆದಿದ್ದ ವಂಚಕರು.**

**159 ಕೋಟಿ ರೂ.ಗಳ ವಂಚನೆ ಪ್ರಕರಣ**

ನವದೆಹಲಿ, ನ. 3 - ಡಿಜಿಟಲ್ ಬಂಧನ ವಂಚನೆಯಲ್ಲಿ ತೊಡಗಿದ್ದವರ ವಿರುದ್ಧ ಜಾರಿ ನಿರ್ದೇಶನಾಲಯ ಆರೋಪ ಪಟ್ಟಿ ದಾಖಲಿಸಿದೆ.

ನಕಲಿ ಐ.ಪಿ.ಒ. ಹೆಸರಿನಲ್ಲಿ ಜನಸಾಮಾನ್ಯರಿಗೆ ಆಮಿಷ ಒಡ್ಡಿ ವಂಚಿಸುತ್ತಿದ್ದ ಬೆಂಗಳೂರಿನ ಎಂಟು ಜನರ ವಿರುದ್ಧ ಜಾರಿ ನಿರ್ದೇಶನಾಲಯ ಪ್ರಾಸಿಕ್ಯೂಷನ್ ದೂರು ದಾಖಲಿಸಿತ್ತು.

ಈ ಬಗ್ಗೆ ತನಿಖೆ ನಡೆಸಿದಾಗ, ದೇಶದ ಹಲವೆಡೆ ವಂಚನೆ ನಡೆಸುತ್ತಿದ್ದ ದೊಡ್ಡ ಜಾಲವೊಂದು ಪತ್ತೆಯಾಗಿದೆ. ಇವರು ನಕಲಿ ಷೇರು ಹೂಡಿಕೆ ಹಾಗೂ ಡಿಜಿಟಲ್ ಬಂಧನದ ದಂಧೆ ನಡೆಸುತ್ತಿದ್ದರು. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆಪ್, ಟೆಲಿಗ್ರಾಂ ಮುಂತಾದ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಇವರು ವಂಚನೆ ನಡೆಸುತ್ತಿದ್ದರು.

ಇವರು ಭಾರಿ ಆದಾಯ ನೀಡುವ ಹೆಸರಿನಲ್ಲಿ ಜನರಿಂದ ಹೂಡಿಕೆ ಪಡೆಯುತ್ತಿದ್ದರು. ನಕಲಿ ವೆಬ್‌ಸೈಟ್ ರೂಪಿಸಿ ಹಾಗೂ ವಾಟ್ಸ್‌ಆಪ್ ಗ್ರೂಪ್‌ಗಳ ಮೂಲಕ ಜನರನ್ನು ಸಂಪರ್ಕಿಸಿ ಇವರು ವಂಚನೆ ನಡೆಸುತ್ತಿದ್ದರು.

ನಕಲಿ ಜಾಹೀರಾತು ಪ್ರದರ್ಶಿಸುತ್ತಿದ್ದ ವಂಚಕರು, ನಮ್ಮಲ್ಲಿ ಹೂಡಿಕೆ ಮಾಡಿ ಭಾರಿ ಆದಾಯ ಗಳಿಸಲಾಗಿದೆ ಎಂಬ ನಕಲಿ ಕಥೆಗಳನ್ನು ಹರಡುತ್ತಿದ್ದರು. ಇದನ್ನು ನಂಬಿ ಜನರು ಇವರ ಬಳಿ ಹೂಡಿಕೆ ಮಾಡುತ್ತಿದ್ದರು. ಇಂತಹ ವಂಚನೆಗೆ ಸಿಲುಕಿದ ಕೆಲವರನ್ನು ಡಿಜಿಟಲ್ ಬಂಧನ ಎಂಬ ಮೋಸಕ್ಕೂ ಗುರಿ ಮಾಡುತ್ತಿದ್ದರು. ಸುಂಕಾಧಿಕಾರಿಗಳು ಹಾಗೂ ಸಿಬಿಐ ಅಧಿಕಾರಿಗಳ ಹೆಸರು ಹೇಳಿಕೊಂಡು ಹಲವಾರು ನಕಲಿ ಕಂಪನಿಗಳಿಗೆ ಹಣ ರವಾನಿಸುವಂತೆ ಹೇಳುತ್ತಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಜನರನ್ನು ಬಂಧಿಸಲಾಗಿದೆ. (4ನೇ ಪುಟಕ್ಕೆ)

# 91 ವರ್ಷಗಳಲ್ಲೇ ಭಾರೀ ಮುಖಭಂಗ



**ನ್ಯೂಜಿಲ್ಯಾಂಡ್ ಎದುರು 0-3 ಅಂತರದ ಕಹಿ ಸೋಲು**

ಮುಂಬೈ, ನ. 3 - ತವರಿನಲ್ಲಿ ನಡೆದ ಮೂರು ಪಂದ್ಯಗಳ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಭಾರತ 91 ವರ್ಷಗಳ ನಂತರ ಮೊದಲ ಬಾರಿಗೆ ಸಂಪೂರ್ಣ ಸೋಲು ಅನುಭವಿಸಿದೆ. ಈ ಹಿಂದೆ 1933ರಲ್ಲಿ ಭಾರತ ಗೃಹ ಸರಣಿಯಲ್ಲಿ ಇಂತಹ ವೈಟ್‌ವಾಶ್ ಸೋಲು ಕಂಡಿತ್ತು.

ನ್ಯೂಜಿಲ್ಯಾಂಡ್ ತಂಡವು ಭಾರತಕ್ಕೆ 0-3 ಅಂತರದ ಕಹಿ ಸೋಲುಣಿಸಿದೆ. ರೋಹಿತ್ ಶರ್ಮ ನೇತೃತ್ವದ ತಂಡ ಈ ಪಂದ್ಯಾವಳಿಗೆ ಸಿದ್ಧವಾಗಿರದೇ ಇದ್ದದ್ದು ಹಾಗೂ ಗೊಂದಲದಲ್ಲಿದ್ದುದು ಸ್ಪಷ್ಟವಾಗಿದೆ.

ಮೂರನೇ ಟೆಸ್ಟ್‌ನಲ್ಲಿ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತ 25 ರನ್ ಗಳ ಸೋಲು ಕಂಡಿತು. ಕೆಲ ತಿಂಗಳ ಹಿಂದಷ್ಟೇ ಶರ್ಮಾ ನೇತೃತ್ವದ ತಂಡ ಟಿ-20 ಚಾಂಪಿಯನ್ ಆಗಿ ಸಂಭ್ರಮಿಸಿತ್ತು.

ಸರಣಿಯನ್ನು 0-2 ಅಂತರದಿಂದ ಈಗಾಗಲೇ ಕಳೆದುಕೊಂಡಿದ್ದ ಭಾರತ, ಸಮಾಧಾನಕರವಾಗಿ ಗೆಲುವು ಸಾಧಿಸಲಿದೆ ಎಂಬ ನಿರೀಕ್ಷೆ ಅಭಿಮಾನಿಗಳಲ್ಲಿತ್ತು. ಗೆಲ್ಲಲು ಕೇವಲ 147 ರನ್ ಗಳಿಸಬೇಕಿತ್ತು. ಆದರೆ, ರಿಶಬ್ ಪಂತ್ ಅವರು 64 ರನ್ ಗಳಿಸಿದ್ದನ್ನು ಹೊರತು ಪಡಿಸಿದರೆ, ಉಳಿದ ಯಾವುದೇ ಬ್ಯಾಟ್ಸ್‌ಮನ್ ಗೆಲುವಿನ ಹೋರಾಟ ತೋರಲಿಲ್ಲ. ಪಂತ್ ಜೊತೆಗೆ ಒಬ್ಬ ಆಟಗಾರ ಜೊತೆಯಾಗಿ ನಿಂತಿದ್ದರೂ, ಪಂದ್ಯದ ಗತಿ ಬದಲಿಸಬಹುದಿತ್ತು.

ನಾಯಕ ರೋಹಿತ್ ಅವರಿಂದ ಹಿಡಿದು, ವಿರಾಟ್ ಕೊಹ್ಲಿ, ಶುಭಮಾನ್ ಗಿಲ್, ಸರ್‌ಫರಾಜ್ ಖಾನ್ ಸೇರಿದಂತೆ ಯಾವುದೇ ಬ್ಯಾಟ್ಸ್‌ಮನ್ ಪಂದ್ಯ ಗೆಲ್ಲುವಂತಹ ಸಾಮರ್ಥ್ಯ ತೋರಲಿಲ್ಲ. ಕೇವಲ 16 ರನ್ ಗಳಿಸುವಷ್ಟರಲ್ಲೇ ಭಾರತ ಐದು ವಿಕೆಟ್ ಕಳೆದುಕೊಂಡಿತ್ತು.

ಈ ಸೋಲಿನ ಕಾರಣದಿಂದಾಗಿ ವರ್ಲ್ಡ್ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಗಳ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನ ಕಳೆದುಕೊಂಡಿದೆ. ಮತ್ತೆ ಈ ಸ್ಥಾನ ಪಡೆಯಲು ರೋಹಿತ್ ಪಡೆ ಸಾಕಷ್ಟು ಬೆವರು ಪರಿಸಬೇಕಿದೆ.

# ಲಷ್ಕರ್ ಉನ್ನತ ಉಗ್ರ ಉಸ್ಮಾನ್ ಹತ

**ಜಮ್ಮು ಮತ್ತು ಕಾಶ್ಮೀರದಲ್ಲಿ ಅಸಾಂಪ್ರದಾಯಿಕ ವಿಧಾನದಲ್ಲಿ ನಡೆದ ಕಾರ್ಯಾಚರಣೆ**

**ಕಾರ್ಯಾಚರಣೆ ವೇಳೆ ಬಿಸ್ಕತ್ ಬಳಸಿದ ಪೊಲೀಸರು**

ಶ್ರೀನಗರ, ನ. 3 - ಜಮ್ಮು ಮತ್ತು ಕಾಶ್ಮೀರದಲ್ಲಿ ಅಸಾಂಪ್ರದಾಯಿಕ ವಿಧಾನದಲ್ಲಿ ಕಾರ್ಯಾಚರಣೆ ನಡೆಸುವ ಮೂಲಕ ಉನ್ನತ ಉಗ್ರನೋರ್ವನನ್ನು ಭದ್ರತಾ ಸಿಬ್ಬಂದಿ ಹೊಡೆದುರುಳಿಸಿವೆ.

ಶನಿವಾರ ಜನನಿಬಿಡವಾದ ಶ್ರೀನಗರದ ಕನ್ಯಾರ್ ಪ್ರದೇಶದಲ್ಲಿ ನಡೆಸಲಾದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಲಷ್ಕರ್ ಎ ತೊಯ್ಬಾ ಉಗ್ರವಾದಿ ಸಂಘಟನೆಯ ಕಮಾಂಡರ್ ಉಸ್ಮಾನ್ ಎಂಬಾತನನ್ನು ಹೊಡೆದುರುಳಿಸಲಾಗಿತ್ತು. ಇದು ಶ್ರೀನಗರದಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆಸಲಾದ ಪ್ರಮುಖ ಕಾರ್ಯಾಚರಣೆಗಳಲ್ಲಿ ಒಂದಾಗಿದೆ.

ಸ್ಥಳೀಯ ಪೊಲೀಸರು ಹಾಗೂ ಸಿಆರ್‌ಪಿಎಫ್ ಸಿಬ್ಬಂದಿ ಈ ಜಂಟಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಕಣಿವೆ ಪ್ರದೇಶವನ್ನು ಚೆನ್ನಾಗಿ ತಿಳಿದಿದ್ದ ಉಸ್ಮಾನ್, 2000ದ ಆರಂಭದಿಂದಲೂ ಹಲವಾರು ಉಗ್ರವಾದಿ ದಾಳಿಗಳಲ್ಲಿ ಭಾಗಿಯಾಗಿದ್ದ. ಈತ (2ನೇ ಪುಟಕ್ಕೆ)

## ರಫ್ತು ಉದ್ಯಮಿಗೆ 5 ಕೋಟಿ ಆನ್‌ಲೈನ್ ವಂಚನೆ

ಥಾಣೆ, ನ. 3 - ಹೂಡಿಕೆಗೆ ಹೆಚ್ಚಿನ ಆದಾಯ ನೀಡುವುದಾಗಿ ಆನ್‌ಲೈನ್ ವಂಚಕರು ಉದ್ಯಮಿ ಒಬ್ಬರಿಗೆ 5 ಕೋಟಿ ರೂ.ಗಳನ್ನು ವಂಚಿಸಿದ್ದಾರೆ ಎಂದು ಥಾಣೆ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂಬೈನಲ್ಲಿರುವ ಆಮದು ಉದ್ಯಮಿ ಈ ವಂಚನೆಗೆ ಗುರಿಯಾಗಿದ್ದಾರೆ. ವಂಚಕರು ತಾವು ಅಮೆರಿಕದ ಕಂಪನಿಯೊಂದಕ್ಕೆ ಸೇರಿದವರು ಎಂದು ಹೇಳಿ ಪರಿಚಯಿಸಿಕೊಂಡಿದ್ದಾರೆ.

ನಂತರ ಆನ್‌ಲೈನ್ ಮೂಲಕ ಹಲವಾರು ಕರೆನ್ಸಿಗಳಲ್ಲಿ ಹೂಡಿಕೆ ಮಾಡು ವ ಂ ತೆ (4ನೇ ಪುಟಕ್ಕೆ)

# ಆರೆಸ್ಸೆಸ್‌ನಿಂದ ಸದೃಢ ಸಮಾಜದ ಸಂಕಲ್ಪ

## ಹರಿಹರದಲ್ಲಿ ನಡೆದ ಆರ್.ಎಸ್.ಎಸ್ ವಾರ್ಷಿಕ ಪಥ ಸಂಚಲನದಲ್ಲಿ ಸತೀಶ್



ಹರಿಹರ, ನ.3- ಆರ್‌ಎಸ್‌ಎಸ್ ಸ್ಥಾಪನೆಯಾಗಿ ಶತಮಾನ ಕಾಣುತ್ತಿರುವ ಈ ಸಂದರ್ಭದಲ್ಲಿ ಕುಟುಂಬ ನಿರ್ಮಾಣ, ಸಾಮರಸ್ಯ, ಪರಿಸರ, ಸ್ವದೇಶಿ ಭಾವ, ನಾಗರೀಕ ಶಿಷ್ಟಾಚಾರವೆಂಬ ಪಂಚ ಪರಿವರ್ತನೆ ಮೂಲಕ ಸಮಾಜವನ್ನು ಸದೃಢಗೊಳಿಸುವ ಸಂಕಲ್ಪ ಹೊಂದಲಾಗಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ದಕ್ಷಿಣ ಪ್ರಾಂತ್ಯ ಶಾರೀರಿಕ ಪ್ರಮುಖ ಸತೀಶ್ ಹೇಳಿದರು.

ನಗರದ ಗಾಂಧಿ ಮೈದಾನದಲ್ಲಿ ಭಾನುವಾರ ಆರ್‌ಎಸ್‌ಎಸ್‌ನ ವಾರ್ಷಿಕ ಪಥಸಂಚಲನದ ನಿಮಿತ್ತ ನಡೆದ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಗತ್ತಿಗೆ ವ್ಯಕ್ತಿತ್ವ ನಿರ್ಮಾಣದ ಶಕ್ತಿಯ ಕಲ್ಪನೆ ನೀಡಿದ ಖ್ಯಾತಿ ಆರ್‌ಎಸ್‌ಎಸ್‌ಗೆ ಸಲ್ಲುತ್ತದೆ. ಜಗತ್ತಿನಲ್ಲಿ ಅಶಾಂತಿ, ಹಿಂಸೆಯ ವಾತಾವರಣ ನಿರ್ಮಾಣವಾದರೆ ಶಾಂತಿಯನ್ನು ಮೂಡಿಸಲು ಭಾರತದತ್ತ ನೋಡುವ ಸ್ಥಿತಿ ಇದೆ. ಈ ಸಂಘಟನೆಯನ್ನು ಸಂಕುಚಿತ ಭಾವನೆಯಿಂದ ನೋಡುವವರು ಇಂದು ದೇಶದ್ರೋಹಿಗಳೆನಿಸಿಕೊಂಡಿದ್ದಾರೆಂದರು.

ಅಧ್ಯಕ್ಷತೆ ವಹಿಸಿದ್ದ ಉದ್ಯಮಿ ಮಂಜುನಾಥ ಮಾತನಾಡಿ, ಬಾಹ್ಯ ಮತ್ತು ಆಂತರಿಕ ದುಷ್ಟ ಶಕ್ತಿಗಳು ಭಾರತವನ್ನು ಕುಗ್ಗಿಸಲು ಪ್ರಯತ್ನ ಮಾಡುತ್ತಿವೆ. ಆ ದುಷ್ಟ ಶಕ್ತಿಗಳನ್ನು ಮೆಟ್ಟಿ ನಿಲ್ಲುವ ಅಗತ್ಯವಿದೆ. ದಲಿತರು, ಶೋಷಿತರನ್ನು ಒಟ್ಟಿಗೆ ಕರೆದೊಯ್ಯುವ ಅಗತ್ಯವಿದೆ, ರಾಷ್ಟ್ರ ಮೊದಲು ಎಂಬ ಭಾವನೆ ಎಲ್ಲರಲ್ಲೂ ಬೆಳೆಯಬೇಕಿದೆ ಎಂದರು.

ನಗರದ ಪ್ರಮುಖ ರಸ್ತೆಗಳಲ್ಲಿ ಸ್ವಯಂ ಸೇವಕರು ಪಥಸಂಚಲನ ನಡೆಸಿದರು. ಶಾಸಕ ಬಿ.ಪಿ.ಹರೀಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ, ನಗರಸಭಾ ಸದಸ್ಯರಾದ ಆಟೋ ಹನುಮಂತಪ್ಪ, ಎ.ಬಿ.ಎಂ. ವಿಜಯಕುಮಾರ್, ಬಿಜೆಪಿ ನಗರ ಘಟಕ ಅಧ್ಯಕ್ಷ ಅಜಿತ್ ಸಾವಂತ್, ದೂಡಾ ಮಾಜಿ ಸದಸ್ಯ ರಾಜು ರೋಖಡೆ,ಡಾ.ಆರ್.ಆರ್.ಖಮಿತ್ಕರ್, ಚಿದಂಬರ ಶಾಸ್ತ್ರಿ, ಶಂಕರ್ ನಾಡಿಗೇರ್, ಬಾತಿ ಚಂದ್ರಶೇಖರ್, ಧರಣೇಂದ್ರ, ಹರೀಶ್, ಶಿವಕುಮಾರ್ ಇದ್ದರು.

# ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಬದ್ದ: ಶಾಸಕ ಎಸ್ಸೆಸ್



**ಹದಡಿ ಗ್ರಾಮದ ಮನೆಗಳಿಗೆ ನಳ ಸಂಪರ್ಕ ಕಾಮಗಾರಿಗೆ ಚಾಲನೆ**

ದಾವಣಗೆರೆ, ನ.3- ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಬದ್ದರಿದ್ದು, ಸಾರ್ವಜನಿಕರು ಸರ್ಕಾರದ ಯಾವುದೇ ಯೋಜನೆಗಳ ಅನುಷ್ಠಾನಕ್ಕೆ ಅಪಸ್ವರ ಎತ್ತದೇ ಸಹಕಾರ ನೀಡಬೇಕೆಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಜಲಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹದಡಿ ಗ್ರಾಮದ 1700 ಮನೆಗಳಿಗೆ ನಳ ಸಂಪರ್ಕ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸರ್ಕಾರದ ಯಾವುದೇ ಒಂದು ಯೋಜನೆ ಅನುಷ್ಠಾನಕ್ಕೆ ಮೊದಮೊದಲು ಅಪಸ್ವರ ಬರುವುದು ಸಹಜ. ಆದರೆ ಸರ್ಕಾರದಿಂದ ಅನುಷ್ಠಾನಗೊಳ್ಳುವ ಯೋಜನೆಗಳು ಜನರ ಪರವಾಗಿ ಇರಲಿದ್ದು, ಇಂತಹ ಯೋಜನೆಗಳ ಬಗ್ಗೆ ಸಾರ್ವಜನಿಕರು ಅಪಸ್ವರ ಎತ್ತದೇ ಸಹಕಾರ ನೀಡುವಂತೆ ತಿಳಿಸಿದರು.

ಹದಡಿ ಗ್ರಾಮ ಸೇರಿದಂತೆ ನಮ್ಮ ಕ್ಷೇತ್ರ ಹಾಗೂ ಜಿಲ್ಲೆಯ ಎಲ್ಲಾ ಗ್ರಾಮಗಳು, ಪಟ್ಟಣಗಳ ಅಭಿವೃದ್ಧಿಗೊಳಿಸಲಾಗುತ್ತಿದ್ದು, ಸಾರ್ವಜನಿಕರು ಸಹಕರಿಸಬೇಕೆಂದ ಅವರು, ಹದಡಿ ಗ್ರಾಮದ ಕೆರೆ ಹೂಳು ತೆಗೆಯಲು ಮತ್ತು ಗ್ರಾಮದ ಶ್ರೀ ಆಂಜನೇಯ ದೇವಸ್ಥಾನ ನವೀಕರಣಗೊಳಿಸಲು ಸಹಕಾರ ನೀಡುವುದಾಗಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಜಿ. ಸಿ.ನಿಂಗಪ್ಪ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ಬಿ. ಹಾಲಪ್ಪ, ರಾಮಪ್ಪ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಪ್ರೇಮಾ ಬಸವರಾಜಪ್ಪನವರ (4ನೇ ಪುಟಕ್ಕೆ)

## ನಿಯಂತ್ರಣ ರೇಖೆ ಬಳಿ ಪಾಕ್ ಫಿರಂಗಿ ಪರೀಕ್ಷೆ

ಶ್ರೀನಗರ, ನ. 3 - ಜಮ್ಮು ಮತ್ತು ಕಾಶ್ಮೀರದ ನಿಯಂತ್ರಣ ರೇಖೆ ಬಳಿ ಪಾಕಿಸ್ತಾನ ಹಲವಾರು ಫಿರಂಗಿಗಳ ಪರೀಕ್ಷೆ ನಡೆಸುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಸ್.ಹೆಚ್. -15 ಮಾದರಿಯ ಫಿರಂಗಿ ಹಾಗೂ ಚೀನಾ ಅಭಿವೃದ್ಧಿ ಪಡಿಸಿರುವ ಟ್ರಕ್ ಮೇಲೆ ಹೇರಲಾಗುವ 155 ಎಂ.ಎಂ. ಹೌವಿಟ್ಜರ್ ಫಿರಂಗಿಗಳ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನ ಇತ್ತೀಚಿನ ದಿನಗಳಲ್ಲಿ ಗಲ್ಫ್ ಹಾಗೂ ಪಶ್ಚಿಮದ ಯುರೋಪ್ ದೇಶಗಳ ಜೊತೆ ರಕ್ಷಣಾ ಸಂಬಂಧ ಹೆಚ್ಚಿಸಿಕೊಂಡಿದೆ. ಟರ್ಕಿ ಜೊತೆಗಿನ ರಕ್ಷಣಾ ಸಂಬಂಧ ಸಹ ಹೆಚ್ಚಿಸಿಕೊಂಡಿದೆ.

ಫಿರಂಗಿಗಳು ಈ ದೇಶಗಳ ಜೊತೆ ಸಂಬಂಧ ಹೊಂದಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಪಟಾಕಿ ವಹಿವಾಟಿನಲ್ಲಿ ಹಿಂದಿನ ವರ್ಷದಷ್ಟೇ ದಾಖಲೆ

## ಕಳ್ಳರ ಉಪಟಳಕ್ಕೆ ಬೇಸತ್ತ ಪಟಾಕಿ ವರ್ತಕರು, ಗ್ರಾಹಕರ ಮೇಲೂ ದೌರ್ಜನ್ಯ

ದಾವಣಗೆರೆ, ನ.3- ಜಿಲ್ಲೆಯಲ್ಲಿ 3 ದಿನಗಳ ಕಾಲ ಸಂಭ್ರಮಿಸಿದ ದೀಪಾವಳಿ ಹಬ್ಬದಲ್ಲಿ ಜನರು ಪಟಾಕಿ ಹೊಡೆದು ಹಬ್ಬಕ್ಕೆ ಮೆರಗು ನೀಡಿದರೇ, ಪಟಾಕಿ ವರ್ತಕರು ಕಳೆದ ವರ್ಷದ ವ್ಯಾಪಾರದ ದಾಖಲೆ ಪ್ರಬಲವಾಗಿ ಮುರಿಯಲಾಗಲಿಲ್ಲ ಎಂದು ತುಸು ಬೇಸರದಲ್ಲಿದ್ದಾರೆ.

ಹೌದು, ನಗರದ ಹೈಸ್ಕೂಲ್ ಮೈದಾನದಲ್ಲಿ ದೀಪಾವಳಿ ನಿಮಿತ್ತ ಈ ಬಾರಿ ಪಟಾಕಿ ಮಾರಾಟಕ್ಕೆ ಒಟ್ಟು 74 ಮಳಿಗೆಗಳಿಗೆ ತಾತ್ಕಾಲಿಕ ಪರವಾನಿಗೆ ಲಭಿಸಿತ್ತು. ಜಿಲ್ಲಾಡಳಿತದ ಸೂಚನೆಯಂತೆ ಅ.30ರಿಂದ ನ.2ರ ವರೆಗೆ ವಹಿವಾಟು ನಡೆದು, ಪಟಾಕಿ ವರ್ತಕರ ನಿರೀಕ್ಷೆಯ ಮಟ್ಟಕ್ಕಿಂತ ಕಡಿಮೆ ವ್ಯಾಪಾರ ಆಗಿದೆ.

ಸರ್ಕಾರದ ಕಠಿಣ ನಿಯಮಗಳಿಗೆ ಬದ್ಧವಾಗಿಯೂ ಅಂದಾಜು 7ರಿಂದ 8 ಕೋಟಿ ರೂ.ಗಳ ಪಟಾಕಿ ವಹಿವಾಟು ನಡೆದಿರಬಹುದು. ಮತ್ತು ಪಟಾಕಿ ಮಾರಾಟಕ್ಕೆ ಮಳೆರಾಯ ಅಡ್ಡಿ ಪಡಿಸದಿರುವುದು ವರ್ತಕರಿಗೆ ನೆಮ್ಮದಿ ತಂದಿದೆ ಎಂದು ಕರ್ನಾಟಕ ಪಟಾಕಿ ವರ್ತಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಿ.ಸಿ. ಶ್ರೀನಿವಾಸ್ ಪತ್ರಿಕೆಗೆ ತಿಳಿಸಿದರು. ಅಲ್ಪ ಪ್ರಮಾಣದಲ್ಲಿ ವಿವಿಧ ಬಗೆಯ ಪಟಾಕಿಗಳು ಉಳಿದಿವೆ. 15 ದಿನ ಕಳೆದರೆ ಗೌರಿ ಹುಣ್ಣಿಮೆ, ತದನಂತರ ತುಳಸಿ ಹಬ್ಬ ಬರಲಿದೆ. ಆಗ ಉಳಿದಂತಹ ಎಲ್ಲಾ ತರಹದ ಪಟಾಕಿಗಳು ಖಾಲಿಯಾಗಲಿವೆ. ಆದಾಗ್ಯೂ ಉಳಿದರೆ ಹಳ್ಳಿಯ ಭಾಗದಲ್ಲಿ ಮಾರಾಟ ಮಾಡಿ ಖಾಲಿ ಮಾಡಲಾಗುವುದು ಎಂದಿದ್ದಾರೆ.



**ಪಟಾಕಿ ಸಂಗ್ರಹಕ್ಕಾಗಿ ಸ್ಥಳ ನೀಡುವಂತೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದೇವೆ. ಸರ್ಕಾರದಿಂದ ಊರ ಹೊರಗೆ ಜಾಗ ನೀಡಿದರೆ ಅಲ್ಲಿ ಗೋದಾಮಿನಲ್ಲಿ ಪಟಾಕಿ ಸಂಗ್ರಹಕ್ಕೆ ಅನುಕೂಲವಾಗಲಿದೆ.**

**- ಪಿ.ಸಿ. ಶ್ರೀನಿವಾಸ್, ಕ.ಪ.ವ.ಕ್ಷೇ.ಸಂ. ಜಿಲ್ಲಾಧ್ಯಕ್ಷ**

**ಕಳ್ಳರ ದೌರ್ಜನ್ಯ :** ಪಟಾಕಿ ವ್ಯಾಪಾರಸ್ಥರು ಕಳ್ಳರ ಉಪಟಳಕ್ಕೆ ನೊಂದಿದ್ದಾರೆ. ಈ ಹಿಂದೆ ಮಳಿಗೆಗಳ ತಗಡು ಕಟ್ ಮಾಡಿ ಕಳ್ಳತನ ಮಾಡಿದ ಘಟನೆ ಸಂಭವಿಸಿದ್ದವು. ಮತ್ತು ಗ್ರಾಹಕರು ಪಟಾಕಿ ಕೊಂಡು ಹೋಗುವಾಗ ಕಳ್ಳರು ರಾಬರಿ ಮಾಡಿ ಪಟಾಕಿ ಕಿತ್ತೊಯ್ಯುವ ಘಟನೆ ಪ್ರತಿ ವರ್ಷ ನಡೆಯುತ್ತಿದ್ದು, ಈ ವರ್ಷವೂ ನಡೆದಿದೆ ಎಂದು ವ್ಯಾಪಾರಸ್ಥರೊಬ್ಬರು ಅಳಲು ತೋಡಿಕೊಂಡರು.

ಗ್ರಾಹಕರ ರೂಪದಲ್ಲಿ ಅಂಗಡಿಗಳಿಗೆ ಬರುವ ಕಳ್ಳರು, ಪಟಾಕಿ ವರ್ತಕರು ಹಾಗೂ ಗ್ರಾಹಕರಿಗೆ ತೊಂದರೆ ನೀಡುವ ಜತೆಗೆ ಜೀವ ಬೆದರಿಕೆಯನ್ನೂ ಹಾಕಿದ ಘಟನೆ ನಡೆದಿವೆ.

ಚಿಕ್ಕ ಮಕ್ಕಳೂ ಸಹ ಪಟಾಕಿ ಆಸೆಗಾಗಿ ಈ ಕೃತ್ಯದಲ್ಲಿ ಭಾಗಿಯಾಗುತ್ತಿದ್ದಾರೆ. ಕಳ್ಳರ ನಿಯಂತ್ರಣಕ್ಕಾಗಿ ಪೊಲೀಸರು ಗಸ್ತು ಹಾಕುತ್ತಿದ್ದರು. ಪೊಲೀಸ್ ಇಲ್ಲದ ವೇಳೆ ಇವರ ಹಾವಳಿ ಹೆಚ್ಚಾಗಿರುತ್ತದೆ ಎಂದು ವರ್ತಕರು ಆರೋಪಿಸಿದ್ದಾರೆ.


॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

**ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ**



ದಿ॥ ಶ್ರೀಮತಿ ಹೆಚ್. ದುಗ್ಗಮ್ಮ

ಶ್ರೀಮತಿ ಅಕ್ಷತಾ ಶ್ರೀ ವಿ. ರಾಘವೇಂದ್ರ ಮತ್ತು ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು, ದಾವಣಗೆರೆ.

ದಿನಾಂಕ : 20.10.2024ನೇ ಭಾನುವಾರ ಬೆಳಗಿನ ಜಾವದಲ್ಲಿ ನಮ್ಮ ಮಾತೃಶ್ರೀಯವರಾದ ದಿವಂಗತ ಎ. ವೀರಭದ್ರಪ್ಪನವರ ಧರ್ಮಪತ್ನಿ **ದಿ॥ ಶ್ರೀಮತಿ ಹೆಚ್. ದುಗ್ಗಮ್ಮನವರು** ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ, ತತ್ಸಂಬಂಧವಾದ

**ವೈಕುಂಠ ಸಮಾರಾಧನೆಯನ್ನು**

ಶ್ರೀ ಶ್ರೀ ಶ್ರೀ ಮಹಾಂತ ರುದ್ರೇಶ್ವರ ಗುರುಗಳ (ಹೆಬ್ಬಾಳು ಸುಕ್ಷೇತ್ರ ವಿರಕ್ತಮಠ) ಸಾನ್ನಿಧ್ಯದಲ್ಲಿ ದಿನಾಂಕ : 04.11.2024ನೇ ಸೋಮವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗೃಹ, #530/109, 2ನೇ ಕ್ರಾಸ್, ಮೌನೇಶ್ವರ ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲ್ಲಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಅಕ್ಷತಾ ಶ್ರೀ ವಿ. ರಾಘವೇಂದ್ರ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು, ಬಂಧು-ಮಿತ್ರರು.

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೆ ಆಹ್ವಾನ ಪತ್ರಿಕೆ ಎಂದು ತಿಳಿದು ಆಗಮಿಸಲು ಕೋರಿದೆ

## ಸಂಕ್ಷಿಪ್ತ ಸುದ್ದಿ

**☞ ಏಕರೂಪ ನಾಗರಿಕ ಸಂಹಿತೆಗೆ ಅವಕಾಶವಿಲ್ಲ : ಸೊರೇನ್**

ರಾಂಚಿ : ಜಾರ್ಖಂಡ್‌ನಲ್ಲಿ ಏಕರೂಪ ನಾಗರಿಕ ಸಂಹಿತೆ ಹಾಗೂ ನಾಗರಿಕರ ರಾಷ್ಟ್ರೀಯ ನೋಂದಣಿಗೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದರು.

**☞ ಕಾಶ್ಮೀರ ಗ್ರನೇಡ್ ದಾಳಿಯಲ್ಲಿ 12 ಜನರಿಗೆ ಗಾಯ**

ಶ್ರೀನಗರ : ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ಮಾರುಕಟ್ಟೆಯಲ್ಲಿನ ಸಿಆರ್‌ಪಿಎಫ್ ಬಂಕರ್ ಬಳಿ ಉಗ್ರರು ಗ್ರನೇಡ್ ದಾಳಿ ನಡೆಸಿದ್ದು, ಕನಿಷ್ಠ 12 ಜನ ಗಾಯಗೊಂಡಿದ್ದಾರೆ.

**☞ ಮೋದಿ ಟೀಕಿಸಿ ಬೋರಾಗಿದೆ ಎಂದ ರಾಹುಲ್**

ವಯನಾಡ್ : ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಇತರರ ಬಗ್ಗೆ ಮಾತನಾಡಿಲ್ಲ. ತಮ್ಮ ಕುಟುಂಬ ಹಾಗೂ ಸ್ಪರ್ಧಾ ಕಣದಲ್ಲಿರುವ ಸಹೋದರಿ ಪ್ರಿಯಾಂಕ ಗಾಂಧಿ ವಾದ್ರ ಅವರ ಬಗ್ಗೆ ಹೆಚ್ಚಾಗಿ ಮಾತನಾಡಿದ್ದಾರೆ. ಪ್ರಧಾನಿ ಮೋದಿ ಕುರಿತು ಮಾತನಾಡಿ ಬೋರಾಗಿದೆ ಎಂದು ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

**☞ ಟಿಡಿಪಿ, ಜೆಡಿಯುಗಳು ವಕ್ಫ್ ಮಸೂದೆ ಬೆಂಬಲಿಸದಂತೆ ಜಮಿಯತ್ ಆಗ್ರಹ**

ನವದೆಹಲಿ : ವಕ್ಫ್ ತಿದ್ದುಪಡಿ ಕಾಯ್ದೆ ಜಾರಿಗೆ ಬಂದಲ್ಲಿ ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡುತ್ತಿರುವ ಜೆಡಿಯು ಹಾಗೂ ಟಿ.ಡಿ.ಪಿ.ಗಳು ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಸಾಧ್ಯವಾಗದು. ಸೆಕ್ಯುಲರ್ ಪಕ್ಷಗಳು ಈ ಮಸೂದೆ ಬೆಂಬಲಿಸಬಾರದು ಎಂದು ಜಮಿಯತ್ ಉಲೇಮಾ - ಎ - ಹಿಂದ್ ಹೇಳಿದೆ.

**☞ ಮುಖ್ಯಮಂತ್ರಿ ಆದಿತ್ಯನಾಥ್‌ಗೆ ಬೆದರಿಕೆ ಮೆಸೇಜ್ ಕಳಿಸಿದ್ದ ಮಹಿಳೆ ಬಂಧನ**

ಮುಂಬೈ : ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಿಗೆ ಬೆದರಿಕೆಯ ಮೆಸೇಜ್ ಕಳಿಸಿದ್ದ 24 ವರ್ಷದ ಮಹಿಳೆಯನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ.

**☞ ಭಾರತ ಮತ್ತು ಚೀನಾ ನಡುವೆ ಇನ್ನಷ್ಟು ಸಕಾರಾತ್ಮಕ ಕ್ರಮ**

ಬ್ರಿಸ್ಬೇನ್ : ಭಾರತ ಮತ್ತು ಚೀನಾ ಗಡಿಯಲ್ಲಿ ಸೈನ್ಯವನ್ನು ಹಿಂದಕ್ಕೆ ಕರೆಸುವ ಪ್ರಕ್ರಿಯೆಯಲ್ಲಿ ತುಸು ಪ್ರಗತಿಯಾಗಿದೆ. ಈ ಕ್ರಮ ಸ್ವಾಗತಾರ್ಹವಾಗಿದೆ. ಇದರಿಂದಾಗಿ ಇನ್ನಷ್ಟು ಕ್ರಮಗಳ ಅವಕಾಶ ದೊರೆತಿದೆ ಎಂದು ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

**☞ ಕೇಂದ್ರ ಸಚಿವ ಸುರೇಶ್ ಗೋಪಿ ವಿರುದ್ಧ ಪ್ರಕರಣ**

ತಿರುವನಂತಪುರಂ : ಕಳೆದ ಏಪ್ರಿಲ್ ತಿಂಗಳಲ್ಲಿ ಕೇರಳದ ತ್ರಿಸ್ಸೂರು ಪೂರಂ ಉತ್ಸವದ ವೇಳೆ ಆಂಬುಲೆನ್ಸ್‌ನಲ್ಲಿ ಪ್ರಯಾಣ ಮಾಡಿದ ಆರೋಪದ ಮೇಲೆ ಕೇಂದ್ರ ಸಚಿವ ಸುರೇಶ್ ಗೋಪಿ ವಿರುದ್ಧ ಕೇರಳ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಸಚಿವರು ಆರೋಪ ತಳ್ಳಿ ಹಾಕಿದ್ದಾರೆ.

# ಸುಂದರ್ ನಿಧನ ಎಐಟಿಯುಸಿ ಸಂತಾಪ

ದಾವಣಗೆರೆ, ನ. 3- ಹಿರಿಯ ಪತ್ರಕರ್ತ, ಪ್ರಗತಿಪರ ಚಿಂತಕ ವಿ.ಟಿ. ಸುಂದರ್ ನಿಧನಕ್ಕೆ ಎಐಟಿಯುಸಿ ಸಂತಾಪ ವ್ಯಕ್ತಪಡಿಸಿದೆ.



ವಿ.ಟಿ. ಸುಂದರ್, ಮಾಜಿ ಶಾಸಕ ಕಾಂ. ಪಂಪಾಪತಿ ಮತ್ತು ಮಾಜಿ ನಗರಸಭಾ ಅಧ್ಯಕ್ಷರಾಗಿದ್ದ ಕಾಂ. ಹೆಚ್ ಕೆ ರಾಮಚಂದ್ರಪ್ಪನವರ ಒಡನಾಡಿಗಳಾಗಿದ್ದರು.

ಪಂಪಾಪತಿ ಅವರು ಶಾಸಕರಾಗಿದ್ದಾಗ ಅವರಿಗೆ ಸಹಾಯಕರಾಗಿ ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಜೊತೆಗೆ ಪಕ್ಷದ ದಾವಣಗೆರೆ ಕಛೇರಿಯನ್ನು ನಿರ್ವಹಿಸುತ್ತಿದ್ದರು.

ಸುಂದರ್ ನಿಧನಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ಶ್ರದ್ಧಾಂಜಲಿ ಅರ್ಪಿಸಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.







# ಮಲೇಬೆನ್ನೂರಿನ ವಿವಿಧೆಡೆ ಸಂಭ್ರಮದ ರಾಜ್ಯೋತ್ಸವ

ಮಲೇಬೆನ್ನೂರು, ನ.3- ಪಟ್ಟಣದ ವಿವಿಧೆಡೆ 69ನೇ ಕನ್ನಡ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಅಂಗವಾಗಿ ಲಕ್ಷ್ಮಿ ಪೂಜೆಗಳನ್ನು ಶುಕ್ರವಾರ ಸಂಭ್ರಮದಿಂದ ಆಚರಿಸಲಾಯಿತು.

ಪುರಸಭೆ ಕಚೇರಿ ಮತ್ತು ಮುಖ್ಯ ವೃತ್ತದಲ್ಲಿ ಪುರಸಭೆಯ ಪ್ರಭಾರಿ ಅಧ್ಯಕ್ಷೆ ಶ್ರೀಮತಿ ನಪ್ಸೀಯಾ ಬಾನು ಚಮನ್ ಷಾ ಅವರು ಧ್ವಜಾರೋಹಣ ನೆರವೇರಿಸಿದರು.

ಸ್ಥಾಯಿ ಸಮಿತಿ ಅಧ್ಯಕ್ಷ ಬಿ.ಮಂಜುನಾಥ್, ಮುಖ್ಯಾಧಿಕಾರಿ ಭಜಕ್ಕನವರ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಕೆ.ಜಿ. ಲೋಕೇಶ್, ಖಲೀಲ್, ಭೋವಿ ಶಿವು, ಸಾಬೀರ್ ಅಲಿ, ನಯಾಜ್, ಬೆಣ್ಣೆಹಳ್ಳಿ ಸಿದ್ದೇಶ್, ದಾದಾಪೀರ್, ಷಾ ಅಬ್ರಾರ್, ಶ್ರೀಮತಿ ವಿಜಯಲಕ್ಷ್ಮಿ ಕೆ.ಪಿ.ಗಂಗಾಧರ್, ಶ್ರೀಮತಿ ಸುಧಾ ಪಿ.ಆರ್.ರಾಜು, ಶ್ರೀಮತಿ ಅಕ್ಕಮ್ಮ ಬಿ.ಸುರೇಶ್, ಶ್ರೀಮತಿ ಸುಲೋಚನಮ್ಮ ಓ.ಜಿ.ಕುಮಾರ್, ಜಿಗಳೇರ ಹಾಲೇಶಪ್ಪ, ಎಂ.ಬಿ.ರುಸ್ತುಂ, ಭೋವಿ ಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

ನಾಡ ಕಚೇರಿ ಆವರಣದಲ್ಲಿ ಉಪತಹಶೀಲ್ದಾರ್ ಆರ್. ರವಿ, ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಪೂಜೆ ಸಲ್ಲಿಸಿದರು. ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಶ್ರೀಧರ್, ಕೊಟ್ರೇಶ್, ಬೋರಯ್ಯ, ಶರೀಫ್, ಸೌಮ್ಯ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಜಿಗಳಿ ವೃತ್ತದಲ್ಲಿ ಕರವೇ ವತಿಯಿಂದ ಕನ್ನಡ ಧ್ವಜ ಸ್ತಂಭ ಸ್ಥಾಪಿಸಿ, ಕನ್ನಡ ಧ್ವಜಾರೋಹಣ ಮಾಡಲಾಯಿತು. ಕರವೇ ಅಧ್ಯಕ್ಷ ಎಳೆಹೊಳೆ ಕುಮಾರ್, ಎಂ.ಕೆ.ಗಜೇಂದ್ರ ಸ್ವಾಮಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಂಘದ ಅಧ್ಯಕ್ಷ ಮಹಮದ್ ಯುನೂಸ್ ಧ್ವಜಾರೋಹಣ ಮಾಡಿದರು. ಸಂಘದ ನಿರ್ದೇಶಕರಾದ ಜಿ.ಮಂಜುನಾಥ್ ಪಟೇಲ್, ಪಿ.ಆರ್.ಕುಮಾರ್, ಕೆ.ಪಿ.ಗಂಗಾಧರ್, ಸಿ.ಅಬ್ದುಲ್ ಹಾದಿ, ಸಿಇಓ ಸಿದ್ದಪ್ಪ, ಶಿಕ್ಷಕರಾದ ಹನುಮಗೌಡ, ಗೋವಿಂದಪ್ಪ ಪಾಲ್ಗೊಂಡಿದ್ದರು.

ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಶಾಲೆಯಲ್ಲಿ ಲಯನ್ಸ್ ಮಾಜಿ ಗವರ್ನರ್ ಡಾ. ಟಿ.ಬಸವರಾಜ್ ಧ್ವಜಾರೋಹಣ ನೆರವೇರಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್ ಹಾಗೂ ಇತರರು ಭಾಗವಹಿಸಿದ್ದರು.

ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆ, ಮಾಲತೇಶ್ ಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀರಲಿಂಗೇಶ್ವರ ವಿದ್ಯಾಸಂಸ್ಥೆ, ಸರ್ಕಾರಿ ಉರ್ದು ಪ್ರೌಢಶಾಲೆ, ಸಮುದಾಯ ಆರೋಗ್ಯ ಕೇಂದ್ರ, ಪೊಲೀಸ್ ಠಾಣೆ, ನೀರಾವರಿ ಇಲಾಖೆ ಕಚೇರಿ, ರೈತ ಸಂಪರ್ಕ ಕೇಂದ್ರ ಸೇರಿದಂತೆ ಇನ್ನೂ ಅನೇಕ ಶಾಲೆಗಳಲ್ಲಿ 69ನೇ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

# ಆರೋಗ್ಯ ಭಾಗ್ಯವನ್ನು ಕೊಡುವವನು ಧನ್ವಂತರಿ



ದಾವಣಗೆರೆ, ನ. 3 - 'ಧನ್ವಂ ತರತೀ ಇತೀ ಧನ್ವಂತರಿ' – ಅಂದರೆ ಪಾಪವನ್ನು ಕಳೆಯುವವನು, ದೋಷವನ್ನು ದೂರ ಮಾಡುವವನು, ಅನಾರೋಗ್ಯವನ್ನು ಕಳೆಯುವವನು, ಆರೋಗ್ಯ ಭಾಗ್ಯವನ್ನು ಕೊಡುವವನು ಶ್ರೀ ಧನ್ವಂತರಿ ದೇವರು ಎಂದು ಹಿರಿಯ ಪ್ರವಚನಕಾರ ಗೋಪಾಲ ಆಚಾರ್ ಮಣ್ಣೂರ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ಆದರ್ಶ ಯೋಗ ಪ್ರತಿಷ್ಠಾನದಲ್ಲಿ ಧನ್ವಂತರಿ ಜಯಂತಿ ಪ್ರಯುಕ್ತ ಇಂದು ಆಯೋಜಿಸಲಾಗಿದ್ದ ವಿಶೇಷ ಪೂಜಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ 'ಧನ್ವಂತರಿ ಜಯಂತಿ ಮಹತ್ವ' ಎಂಬ ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

**ವೇದಬ್ರಹ್ಮ ಗೋಪಾಲ ಆಚಾರ್ ಮಣ್ಣೂರ್**

ಮುನಿ ಶ್ರೇಷ್ಠ ದೂರ್ವಾಸರ ಶಾಪದಿಂದ ದೇವತೆಗಳೆಲ್ಲರೂ ಸ್ವರ್ಗವನ್ನು ತ್ಯಜಿಸಬೇಕಾದ ಸಂದರ್ಭದಲ್ಲಿ ಅಮರತ್ವವನ್ನು ಪಡೆಯಲು ದೇವತೆಗಳು ಮತ್ತು ರಾಕ್ಷಸರು ಸೇರಿ ಕ್ಷೀರ ಸಾಗರದಲ್ಲಿ ಸಮುದ್ರ ಮಥನ ಮಾಡುವ ಕಾಲದಲ್ಲಿ ಅಮೃತ ಕಲಶವನ್ನು ಹೊತ್ತು ಧರೆಗಿಳಿದ ಮಹಾವಿಷ್ಣುವಿನ ರೂಪವೇ ಶ್ರೀ ಧನ್ವಂತರಿ ದೇವರು ಎಂದು ತಿಳಿಸುತ್ತಾ, ಈ ದಿನದ ವಿಶೇಷತೆ, ವೈಶಿಷ್ಟ್ಯತೆಗಳನ್ನು ತಿಳಿಸುತ್ತಾ, ಆರೋಗ್ಯ ಭಾಗ್ಯವನ್ನು ಪಡೆಯಲು ಪ್ರತಿನಿತ್ಯ ಒಂದು ಕಳಶದ ತುಂಬ ನೀರನ್ನು ತುಂಬಿ ತುಳಸಿ ಎಲೆಯನ್ನು ಹಾಕಿ ಎರಡೂ ಕೈ ಹಸ್ತವನ್ನು ಕಳಶದ ಮೇಲಿಟ್ಟು ಸಂಕಲ್ಪ ಮಾಡಿ 'ಓಂ ಶ್ರೀ ಧನ್ವಂತರಿಯೇ ನಮಃ' ಎಂಬ ಮಂತ್ರವನ್ನು ಕನಿಷ್ಠ 12 ರಿಂದ ಗರಿಷ್ಠ 108 ಬಾರಿ ಜಪಿಸುವುದು. ಇದರಿಂದ ನಮ್ಮ ಇಷ್ಟಾರ್ಥಗಳು ನೆರವೇರುವವು ಎಂದು ಸರಳ ಪೂಜಾ ವಿಧಾನವನ್ನು ತಿಳಿಸಿಕೊಟ್ಟರು.

ಗೋಪಾಲ ಆಚಾರ್ ಮಣ್ಣೂರ್ ಮಾರ್ಗದರ್ಶನ ದಲ್ಲಿ ಪೂಜಾ ಕಾರ್ಯಕ್ರಮವನ್ನು ದಂಪತಿಗಳಾದ ಭರತ್ ವಾಥೋನೆ ಮತ್ತು ಶ್ರೀಮತಿ ಸುಮಾ ವಾಥೋನೆ, ಚಿ. ಶ್ರೀಯನ್ ಅವರುಗಳು ನಡೆಸಿಕೊಟ್ಟರು. ಹೂವಿನ ಅಲಂಕಾರ ಸೇವೆಯನ್ನು ಗಣೇಶ್ ವಾಥೋನೆ ಕುಟುಂಬದವರು ಅರ್ಪಿಸಿದರು. ಶ್ರೀಮತಿ ಪೂರ್ಣಿಮಾ ವರದರಾಜ್ ಭಕ್ತಿ ಸಮರ್ಪಿಸಿದರು. ಶಂಕರ್ ಎಲ್.ಎ. ಕುಟುಂಬದವರು ಪ್ರಸಾದ ಸೇವೆಯನ್ನು ಮಾಡಿದರು.

ಕಾರ್ಯಕ್ರಮದಲ್ಲಿ ರಂಗೋಲಿ ಗೌರಮ್ಮ, ರೇಖಾ ಕಲ್ಲೇಶ್, ಶಾಂತಮ್ಮ, ಸಾವಿತ್ರಮ್ಮ, ಸಂಧ್ಯಾ, ಜ್ಯೋತಿಲಕ್ಷ್ಮಿ, ಹೆಚ್. ಸಂತೋಷ್, ಯೋಗ ವಿಜ್ಞಾನ ವಿಭಾಗದ ವಿ.ಕೆ. ರಾಹುಲ್, ಆರ್.ಜಿ. ಬೇಬಿ ಗುರುಪ್ರಿಯಾ, ಪೂಜಾ ಕಾರ್ಯದ ಯಶಸ್ಸಿಗೆ ಸಹಕರಿಸಿದರು. ಕಡೂರಿನ ಎಂ. ನಾಗೇಂದ್ರರಾವ್ ಮತ್ತು ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿ ಜೀವನ್ ಎನ್. ಪವಾರ್, ಅಂಚೆ ಇಲಾಖೆಯ ಡಿ. ಹೆಚ್.ಎಂ. ವೇದಾವತಿ, ಮೀಸಲು ಪಡೆಯ ಎಸ್. ಚಂದ್ರ, ಯೋಗ ಸಾಧಕ ಮಹಾಂತೇಶ್ ಅವರುಗಳು ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದರು.

# ಡಿಜಿಟಲ್ ವಂಚನೆ

**(1ನೇ ಪುಟದಿಂದ)** ಬಂಧಿತರು ಈಗ ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ. ಬಂಧಿತರು ಸುಮಾರು 159 ಕೋಟಿ ರೂ.ಗಳ ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಈ ವಂಚನೆಗಾಗಿ ನೂರಾರು ಸಿಮ್ ಕಾರ್ಡುಗಳನ್ನು ಬಳಸಲಾಗಿದೆ.

ಈ ಕಾರ್ಡುಗಳನ್ನು ನಕಲಿ ಕಂಪನಿಗಳ ಬ್ಯಾಂಕ್ ಖಾತೆಗಳಿಗೆ ಜೋಡಣೆ ಮಾಡಲಾಗಿತ್ತು. ಇನ್ನು ಕೆಲವನ್ನು ವಾಟ್ಸ್‌ಆಪ್ ಖಾತೆ ತೆರೆಯಲು ಬಳಸಲಾಗಿತ್ತು.

ವಂಚಕರು ತಮಿಳುನಾಡು, ಕರ್ನಾಟಕ ಹಾಗೂ ಇತರೆ ಕೆಲ ರಾಜ್ಯಗಳಲ್ಲಿ 24 ನಕಲಿ ಕಂಪನಿಗಳನ್ನು ತೆರೆದಿದ್ದರು. ಈ ಕಂಪನಿಗಳ ಹೆಸರಿನಲ್ಲಿ ಸಿಮ್ ಕಾರ್ಡುಗಳನ್ನು ಖರೀದಿಸುತ್ತಿದ್ದರು. ಈ ಕಾರ್ಡುಗಳು ವಂಚಕರು ಅನಾಮಿಕರಾಗಿರಲು ನೆರವು ನೀಡುತ್ತಿತ್ತು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ವಂಚಕರು ತಾವು ಪಡೆದ ಹಣವನ್ನು ಕ್ರಿಪ್ಟೋ ಕರೆನ್ಸಿಗೆ ಬದಲಿಸಿ ಅದನ್ನು ದೇಶದಿಂದ ಹೊರಗೆ ರವಾನಿಸುತ್ತಿದ್ದರು ಎಂದು ಜಾರಿ ನಿರ್ದೇಶನಾಲಯದ ತನಿಖೆಯಿಂದ ತಿಳಿದು ಬಂದಿದೆ.

ಚರಣ್ ರಾಜ್ ಎಂಬಾತ ಹಗರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದ. ಈತ ಜನರನ್ನು ಕಂಪನಿಗಳ ನಿರ್ದೇಶಕರಾಗಿ ನೇಮಿಸುತ್ತಿದ್ದ ಹಾಗೂ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದ.

ಶಶಿ ಕುಮಾರ್ ಎಂಬಾತ ಕಂಪನಿಗಳನ್ನು ಸ್ಥಾಪಿಸಲು ಹಾಗೂ ಅಪರಾಧದಿಂದ ಬಂದ ಹಣವನ್ನು ಬ್ಯಾಂಕಿಂಗ್ ವ್ಯವಸ್ಥೆ ಮೂಲಕ ನಿರ್ವಹಿಸುವ ಕೆಲಸ ಮಾಡುತ್ತಿದ್ದ ಎಂದು ಜಾರಿ ನಿರ್ದೇಶನಾಲಯದ ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

# ಲಯನ್ಸ್‌ನಿಂದ ರೇಷನ್ ಕಿಟ್




ಮಲೇಬೆನ್ನೂರು, ನ.3- ಇಲ್ಲಿನ ಲಯನ್ಸ್ ಕ್ಲಬ್ ವತಿಯಿಂದ ದೀಪಾವಳಿ ಹಬ್ಬದ ಅಂಗವಾಗಿ 10 ಜನ ಕಡು ಬಡವರಿಗೆ ರೇಷನ್ ಕಿಟ್‌ಗಳನ್ನು ಲಯನ್ಸ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಓ. ಜಿ. ರುದ್ರಗೌಡ್ರು, ಸಿರಿಗೆರೆ ಸಿದ್ದಣ್ಣ ಅವರು ವಿತರಿಸಿದರು.

# ಆನ್ ಲೈನ್ ವಂಚನೆ

**(1ನೇ ಪುಟದಿಂದ)** ಮನವೊಲಿಸಿದ್ದಾರೆ. ಅದರಂತೆ ಕಳೆದ ಕೆಲ ತಿಂಗಳಲ್ಲಿ ಉದ್ಯಮಿ 5 ಕೋಟಿ ರೂ. ಹೂಡಿಕೆ ಮಾಡಿದ್ದಾರೆ. ಆದರೆ, ಈ ಹೂಡಿಕೆಗೆ ಯಾವುದೇ ಆದಾಯ ಬರದಿದ್ದಾಗ ಅವರು ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ. ನಂತರ ವಂಚನೆಯ ಇಡೀ ಪ್ರಕರಣ ಬೆಳಕಿಗೆ ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ.

# ಅಭಿವೃದ್ಧಿಗೆ ಬದ್ಧ

**(1ನೇ ಪುಟದಿಂದ)** ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಎಂ.ಹೆಚ್.ರಾಜಪ್ಪ, ಸಾವಿತ್ರಮ್ಮ ಗಣಾಚಾರಿ, ಮಾಲತೇಶ್, ಹನು ಮಂತಪ್ಪ, ಸಬ್ ಇನ್ಸ್‌ಪೆಕ್ಟರ್ ಶ್ರೀಶೈಲ ಪಟ್ಟಣಶೆಟ್ಟಿ, ಪಿಡಿಓ ಜಗದೀಶ್, ಅಭಿಯಂತರರಾದ ಲೋಹಿತ್‌ಕುಮಾರ್ ಮತ್ತಿತರರಿದ್ದರು.

# ಜನರ ಸ್ವಾವಲಂಬನೆಗೆ ಧರ್ಮಸ್ಥಳ ಯೋಜನೆ ಸಹಕಾರಿ

## ರಾಣೇಬೆನ್ನೂರು ಪ್ರಗತಿ ಬಂಧು ಒಕ್ಕೂಟದ ಪದಾಧಿಕಾರಿಗಳ ಸಮಾವೇಶದಲ್ಲಿ ಬಸವರಾಜ ಹುಲ್ಲತ್ತಿ



ರಾಣೇಬೆನ್ನೂರು, ನ. 3 - ಗ್ರಾಮೀಣ ಜನರು ಸ್ವಾವಲಂಬನೆ ಜೀವನ ಸಾಗಿಸಲು ಆರ್ಥಿಕವಾಗಿ, ಶೈಕ್ಷಣಿಕವಾಗಿ ತಿಳುವಳಿಕೆ ದೃಷ್ಟಿಯಿಂದಲೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳು ಪ್ರಯೋಜನಕಾರಿಯಾಗಿವೆ ಎಂದು ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಬಸವರಾಜ ಹುಲ್ಲತ್ತಿ ಹೇಳಿದರು.

ನಗರದ ಕಾಕಿ ಸಮುದಾಯ ಭವನದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ನಡೆದ ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟದ ಪದಾಧಿಕಾರಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾಭಿಮಾನಿ ಕರವೇ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆ ಕಳೆದ 14 ವರ್ಷಗಳಿಂದ ಈ ಭಾಗದಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸದೃಢರಾಗಲು ಜನರಿಗೆ ಬಹಳ ಪೂರಕವಾದ ಕೆಲಸ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಸಂಸ್ಥೆಯ ಕಾರ್ಯಗಳು ಪಾರದರ್ಶಕವಾಗಿದ್ದು, ಯೋಜನೆಯ ಉಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಶಿವರಾಯ ಪ್ರಭು ಮಾತನಾಡಿ, ಕ್ಷೇತ್ರ ಧರ್ಮಸ್ಥಳದ ಹಿನ್ನೆಲೆ, ಗ್ರಾಮಾಭಿವೃದ್ಧಿ ಯೋಜನೆ ಬೆಳೆದು ಬಂದ ದಾರಿ, ಗ್ರಾಮ ಅಭಿವೃದ್ಧಿ ಯೋಜನೆಯಲ್ಲಿ ಒಳಗೊಂಡಿರುವ ಕಾರ್ಯ ಕ್ರಮಗಳ ಕುರಿತು ವಿವರಿಸಿದರು.

ಐಡಿಬಿಐ ಬ್ಯಾಂಕಿನ ವ್ಯವಸ್ಥಾಪಕ ಪ್ರಸನ್ನ ಕುಮಾರ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಬ್ಯಾಂಕ್‌ನ ಆರ್ಥಿಕ ಸಹಯೋಗದಿಂದ ಉತ್ತಮ ಕಾರ್ಯ ನಡೆಯುತ್ತಿದೆ. ಬ್ಯಾಂಕಿನಿಂದ ಸಂಘದ ಸದಸ್ಯರಿಗೆ ಪ್ರಗತಿ ನಿಧಿ ಸಾಲಕ್ಕೆ ನೀಡುತ್ತಿರುವ ಬಡ್ಡಿಯ ಬಗ್ಗೆ ಹಾಗೂ ಬ್ಯಾಂಕುಗಳಿಗೆ ಸಂಘದ ಸದಸ್ಯರು ನೀಡಬೇಕಾದ ದಾಖಲಾತಿಯ ಬಗ್ಗೆ ಮತ್ತು ಬ್ಯಾಂಕಿನಿಂದ ತಾಲ್ಲೂಕಿನಾದ್ಯಂತ ಈಗಾಗಲೇ ವಿತರಿಸಿದ ಪ್ರಗತಿ ನಿಧಿ ಸಾಲದ ಬಗ್ಗೆ ಹಾಗೂ ಮರುಪಾವತಿಯ ಗುಣಮಟ್ಟದ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯ ಬುಳ್ಳಪ್ಪ ಬಣಕಾರ, ಯೋಜನಾಧಿಕಾರಿ ಎಂ.ಪಿ ಮಂಜುನಾಥ್ ಮಾತನಾಡಿದರು.


**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸಲ್ ಕಟ್ಟಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ. ಗರಿಷ್ಠ ವೇತನ ನೀಡಲಾಗುವುದು.
89700 08040

**ಸೈಟು ಮಾರಾಟಕ್ಕಿದೆ**
SS ಬಡಾವಣೆ ದಾವಣಗೆರೆ 'A' ಬ್ಲಾಕ್ ಪೂರ್ವ ದಿಕ್ಕಿನ 40x60 ಅಡಿ ಅಳತೆಯ MBA ಕಾಲೇಜ್ ರಸ್ತೆ, ಪೋಸ್ಟ್ ಆಫೀಸ್ ಪಕ್ಕ ಎಡಕ್ಕೆ.
91138 89042

**ವಾಣಿಜ್ಯ ಕಟ್ಟಡ ಬಾಡಿಗೆಗಿದೆ**
ಲಿಫ್ಟ್, ಪ್ರತೀ ಫ್ಲೋರ್‌ಗೂ ವಾಷ್ ರೂಂ, 24 ಗಂಟೆ ನೀರಿನ ಸೌಕರ್ಯ, ವಾಣಿಜ್ಯ ಉಪಯೋಗದ ವಿದ್ಯುತ್ ಸೌಲಭ್ಯವುಳ್ಳ 5080 ಚ.ಅಡಿ ಅಳತೆಯ ಹೊಸದಾದ 3 ಅಂತಸ್ತಿನ ವಾಣಿಜ್ಯ ಕಟ್ಟಡ ದಾವಣಗೆರೆ ನರಸರಾಜ ರಸ್ತೆಯಲ್ಲಿ ಬಾಡಿಗೆಗೆ ದೊರೆಯುತ್ತದೆ.
94812 62505

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 40x60 North, 120 ಅಡಿ ರೋಡಿಗಿದೆ 50x80 East, 40x60 East, 30x50 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**CARS FOR SALE**
Hyundai Creta 1.4
Vitara Brezza ZDI +
ALTO K10 Vxi
Innova Crysta [Z]
Contact : Daivik Iynahalli
99456 43223

**ಬೇಕಾಗಿದ್ದಾರೆ**
ಹೋಟೆಲ್ ನಲ್ಲಿ ಪಾರ್ಸಲ್ ಕಟ್ಟಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ ಗರಿಷ್ಠ ವೇತನ ನೀಡಲಾಗುವುದು
89700 08040

**ಮನೆ ಲೀಸ್‌ಗೆ/ಬಾಡಿಗೆಗಿದೆ**
ದಾವಣಗೆರೆ SS ಲೇಔಟ್ ಬಿ ಬ್ಲಾಕ್ ರಿಂಗ್ ರೋಡ್ ಹತ್ತಿರ, (ಸಪ್ತಗಿರಿ ಸ್ಕೂಲ್ ರೋಡ್) $ 105, Shah Exotica ಅಪಾರ್ಟ್‌ಮೆಂಟ್‌ನಲ್ಲಿ 3 ಬೆಡ್ ರೂಂ ಕಾರ್ ಪಾರ್ಕಿಂಗ್ ಬೋರ್ ಮತ್ತು ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ /ಲೀಸ್‌ಗಿದೆ.
8055161736, 9108306960

**ಬೇಕಾಗಿದ್ದಾರೆ**
ಚೈನೀಸ್ ಭಟ್ರು ಬೇಕಾಗಿದ್ದಾರೆ.
95130 33363

**WANTED**
Receptionist to work at DTDC Courier Office Shamanur, Davanagere. Time : 10.30Am to 8.Pm (Candidate from Shamanur preferred) Conact :
91486 81600

**ಬೇಕಾಗಿದ್ದಾರೆ**
ಹೋಟೆಲ್‌ಗೆ ಮಹಿಳಾ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ :
90367-34919

**ಹೋಟೆಲ್ ಬಾಡಿಗೆಗೆ**
ಶಾಮನೂರು ರಸ್ತೆ, MRP ಶಾಪ್ ಪಕ್ಕದಲ್ಲಿರುವ ಸುಸಜ್ಜಿತವಾದ ಹೋಟೆಲ್ ಬಾಡಿಗೆಗೆ ಇದೆ.
98441 27137

**ಬೇಕಾಗಿದ್ದಾರೆ**
ಬೇಕರಿ ಕೌಂಟರ್ ಕೆಲಸಕ್ಕೆ 4 ಜನ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ. ಎಸ್.ಎಸ್. ಬೇಕರಿ ಹೈಟೆಕ್ ಹಾಸ್ಪಿಟಲ್ ರಸ್ತೆ. ಕಾಳಿದಾಸ ಸರ್ಕಲ್ ಹತ್ತಿರ. ದಾವಣಗೆರೆ.
98441 07062

**DOUBLE ROOMS**
**ಮನೆ ಲೀಸ್‌ಗೆ ಇರುತ್ತದೆ**
ಎಲ್ಲಾ ಸೌಲಭ್ಯವುಳ್ಳ ಹೊಸ ಮನೆ ಲೀಸ್‌ಗೆ ಇದೆ. ಕೊಂಡಜ್ಜಿ ರಸ್ತೆ, ವಿನಾಯಕ ಪಬ್ಲಿಕ್ ಸ್ಕೂಲ್ ಹಿಂಭಾಗ ಅಶೋಕ್ ನಗರ, ದಾವಣಗೆರೆ.
95356 10817, 74060 70957

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಎಸ್ ಎಸ್.ಎಲ್ ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು. ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಸಾಮಗ್ರಿಗಳು ದೊರೆಯುತ್ತವೆ**
ಹೋಟೆಲ್ ಮಾಡಲು ಹೋಟೆಲ್ ಸಾಮಗ್ರಿಗಳು ಖರೀದಿಗೆ ದೊರೆಯುತ್ತವೆ.
94826 84663

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮದುವೆಗೆ ವಧು ಬೇಕು**
ನನಗೆ 58 ವರ್ಷ ಲಿಂಗಾಯತ ವಧು ಅಥವಾ ಸಸ್ಯಹಾರಿ ವಧು ನಡೆಯುತ್ತದೆ. ಮಕ್ಕಳು ಇಲ್ಲದವರು, ವಿಧವೆಯರು ಡೈವರ್ಸ್ ಆದವರು ಸಂಪರ್ಕಿಸಿ : ಫೋಟೋ ಬೈಯೋಡೇಟಾ ಕಳಿಸಿರಿ ನನಗೆ ಗೌರ್ನಮೆಂಟ್ 30000 ಸಾವಿರ ಪೆನ್‌ಶನ್ ಬರುತ್ತದೆ. ಸ್ವಂತ ಮನೆ ಇದೆ. ಹೆಂಡತಿ ಮರಣ ಹೊಂದಿದ್ದಾರೆ. ಈ ಫೋನ್ ನಂ. ಸಂಪರ್ಕಿಸಿ :
99457 21565

**WANTED**
Boys & Girls required for billing work at Food Mart Supermarket.
Quli : Any Degree
98864 63531

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ, ಅನುಭವ ಇಲ್ಲದವರು ಸಂಪರ್ಕಿಸಬಹುದು.
80733 01110

**ಬಾಡಿಗೆಗೆ ದೊರೆಯುತ್ತದೆ**
ವಿದ್ಯಾನಗರದ ಹೊಸ ಬಡಾವಣೆಯಲ್ಲಿ ನೂತನ ಕಾಲೇಜ್‌ನ ಹತ್ತಿರ 5ನೇ ಬಿ ಕ್ರಾಸ್‌ನಲ್ಲಿ ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿರುತ್ತದೆ. ಹಾಗೂ ಸಿಂಗಲ್ ಬೆಡ್ ರೂಮ್ ಹೌಸ್ ಎರಡನೇ ಅಂತಸ್ತಿನಲ್ಲಿ ಬಾಡಿಗೆಗೆ ದೊರೆಯುತ್ತದೆ.
96638 11559

**ಮಾಯಕೊಂಡ ಡಿ.ಟಿ.ಪಿ. ಮತ್ತು ಜೆರಾಕ್ಸ್ ಸೆಂಟರ್**
• G-ಸೇವಾಕೇಂದ್ರ • ಆನ್‌ಲೈನ್ ಸರ್ವೀಸ್ • ಇ-ಸ್ಟಾಂಪ್ ಪೇಪರ್ • ಕನ್ನಡ, • ಇಂಗ್ಲಿಷ್ ಟೈಪಿಂಗ್ • ಪ್ರಮಾಣ ಪತ್ರ • ಅಗ್ರಿಮೆಂಟ್ಸ್ • ವಾಟ್ಸ್‌ಅಫ್ ಪ್ರಿಂಟ್ ಔಟ್ • ಲ್ಯಾಮಿನಿಷನ್ • ಲಗ್ನ ಪತ್ರಿಕೆ • ಲೇಟರ್ಸ್ ಪ್ಯಾಡ್ • ಕಲರ್ ಜೆರಾಕ್ಸ್ ಮಾಡಿಕೊಡಲಾಗುತ್ತದೆ.
#181/1 ತೋ 3EF, ರವಿ ನರ್ಸಿಂಗ್ ಹೋಮ್, ಡಾ॥ ಕೆಂಚಪ್ಪ ಆಸ್ಪತ್ರೆ ಪಕ್ಕ ನರಸರಾಜ ರೋಡ್, ದಾವಣಗೆರೆ-577001.
ಮೊ. : 98444 38007

**ಕಾಡು ಬೆಳೆಸಿ ನಾಡು ಉಳಿಸಿ**

**RAJASTHAN TOUR**
Dep: 29th Nov, 10 Days Premium Group Tour Rs, 59,600 pp Includes: Flight Ticket 3 Star Hotels South Indian meals Volvo bus transfer Local Tour Manager Please Contact :
DVG WORLD TOURS
P.J. Exten, Davangere
99006 66122
99862 30333

**ಹೋಟೆಲ್ ಮಾರಾಟಕ್ಕಿದೆ**
ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ ದಾವಣಗೆರೆ - 4. ಸಂಪರ್ಕಿಸಿ :
84948 20288

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು.
Qualification: Anything is OK
ಸ್ಥಳ: 1) K.R. Market, Davanagere 2) Charlie Pailwan Road, Davangere.
Contact: 99167 36057, 95350 51589

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. 30x40, 30x50, 40x60
93431 10009
98458 61220

**ಖಾಲಿ ಜಾಗ ಬಾಡಿಗೆಗೆ**
ಪಾಲಿ ಕ್ಲಿನಿಕ್ ಜೊತೆಗೆ ಮೆಡಿಕಲ್ ಸ್ಟೋರ್/ಆಪ್ಟಿಕಲ್ಸ್, ಫಾರ್ಮಾ, ಕಾರ್ ಸೇಲ್/ಸರ್ವೀಸ್, ಕೆಫೆ/ಫಾಸ್ಟ್ ಫುಡ್/ ಗಾರ್ಡನ್ ರೆಸ್ಟೋರೆಂಟ್, ಗ್ರಾನೈಟ್, ಗೋಡೌನ್, ಹಾರ್ಡ್‌ವೇರ್, ಷೋರೂಮ್, ಇತರ ಉಪಯೋಗಕ್ಕೆ ಪಿ.ಜೆ. ಬಡಾವಣೆ, ಎವಿಕೆ/ಸ್ಟೇಡಿಯಂ ರಸ್ತೆಯಲ್ಲಿ ಪೂರ್ವ ಮುಖ 3500 ಅಡಿ ಖಾಲಿ ಜಾಗ ಬಾಡಿಗೆಗೆ ಇದೆ.
95136 99252

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮತ್ತು ಟೆಲಿಕಾಲರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ : ಸಂಪರ್ಕಿಸಿ :
96068 64777

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**WANTED**
Banking Sector Tele Caller (Female Only)
Qualification : Any Degree
90715 55081
Interview Time : 11AM

**HOUSES FOR RENT**
1BHK, 2BHK, 3BHK, 4BHK Mcc B Block, SS Layout A&B Block, Mahalkshmi Layout, Siddaveerappa Layout, Anjaneya Badavane.
Dakshith Iyanahalli
96061 26471

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ) ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20X30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ :
94484 39639

# ನಗರದಲ್ಲಿ ಇಂದಿನಿಂದ ಶ್ರೀಶೈಲ ಪೀಠದ ಉಭಯ ಜಗದ್ಗುರುಗಳ ಸ್ಮರಣೋತ್ಸವ

ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 38ನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮವು ಇಂದಿನಿಂದ ಮೂರು ದಿನಗಳ ಕಾಲ ಶ್ರೀ ಡಾ. ಸದ್ಯೋಜಾತ ಸ್ವಾಮೀಜಿ ಹಿರೇಮಠದಲ್ಲಿ ನಡೆಯಲಿದೆ.

ಜೊತೆಗೆ, ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 13ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವೂ ಜರುಗಲಿದೆ ಎಂದು ಪುಣ್ಯಾರಾಧನಾ ಸೇವಾ ಸಮಿತಿ ಕಾರ್ಯಾಧ್ಯಕ್ಷ ಎನ್.ಎ. ಮುರುಗೇಶ್ ತಿಳಿಸಿದ್ದಾರೆ.

ಈ ಎಲ್ಲಾ ಕಾರ್ಯಕ್ರಮಗಳ ದಿವ್ಯ ಸಾನ್ನಿಧ್ಯವನ್ನು ಉಜ್ಜಿನಿ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರು ಮತ್ತು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ವಹಿಸುವರು.




ಇಂದು ಸಂಜೆ 6 ಗಂಟೆಗೆ ಭಾವೈಕ್ಯ ಜನಜಾಗೃತಿ ಧರ್ಮ ಸಮಾರಂಭ ನಡೆಯಲಿದ್ದು, ರಾಮಘಟ್ಟದ ಶ್ರೀ ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಮುಷ್ಟೂರು ಓಂಕಾರ ಉಚ್ಚನಾಗಲಿಂಗ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಲಿದ್ದು, ಎಡೆಯೂರು ಬಾಳೇ ಹೊನ್ನೂರು ಶಾಖಾಮಠದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ ನಾಂದಿ ನುಡಿಗಳನ್ನಾಡುವರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಸಮಾರಂಭ ಉದ್ಘಾಟಿಸಲಿದ್ದು, ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾಧಿಕಾರಿ ಜಿ. ಎಂ.ಗಂಗಾಧರಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ನಗರಪಾಲಿಕೆ ಸದಸ್ಯ ಎ. ನಾಗರಾಜ್ ಮುಖ್ಯ ಅತಿಥಿಗಳಾಗಿದ್ದಾರೆ.

ವೀರಶೈವ ಧರ್ಮವನ್ನು ಪೋಷಿಸಿದ ರಾಜ ಮನೆತನಗಳು ವಿಷಯ ಕುರಿತು ವಿಶ್ರಾಂತ ಪ್ರಾಧ್ಯಾಪಕ ಸಿ.ಜಿ. ಮಠಪತಿ (ಹಿಪ್ಪರಗಿ-ಬೆಳಗಾವಿ) ಉಪನ್ಯಾಸ ನೀಡುವರು. ಸಾಹಿತ್ಯ ಕ್ಷೇತ್ರದ ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತ ಬಾ.ಮ. ಬಸವರಾಜಯ್ಯ ಅವರನ್ನು ಸನ್ಮಾನಿಸಲಾಗುತ್ತದೆ.

**ಗುರುರಕ್ಷೆ:** ಶ್ರೀಮತಿ ಸೌಭಾಗ್ಯ ಬೀಳಗಿಮಠ, ಎಸ್ಪಿ ಉಮಾ ಪ್ರಶಾಂತ್, ಪೊಲೀಸ್ ನಿರೀಕ್ಷಕರಾದ ಶ್ರೀಮತಿ ಮಲ್ಲಮ್ಮ ಚೌಬೆ, ನಗರಪಾಲಿಕೆ ಸಹಾಯಕ ಆಯುಕ್ತರಾದ ಶ್ರೀಮತಿ ಲಕ್ಷ್ಮಿ, ಬೆಳ್ಳೂಡಿ ಶಿವಕುಮಾರ್, ವಿ.ಆರ್. ಮಠ (ಸಾಲಕಟ್ಟೆ), ಹೆಚ್.ಎಂ. ನಾಗರಾಜ್, ವಿಜಯಕುಮಾರ್ ಅಣಬೂರು ಮಠ, ಯಲವಟ್ಟಿ ಹಾಲೇಶ್.

### ಇಂದು ಜಗದ್ಗುರುಗಳಿಂದ ಇಷ್ಟಲಿಂಗ ಮಹಾಪೂಜೆ



### ಇಷ್ಟಲಿಂಗ ಮಹಾಪೂಜೆ

ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರಿಂದ ಇಷ್ಟಲಿಂಗ ಮಹಾಪೂಜೆ ಕಾರ್ಯಕ್ರಮವನ್ನು ಪಿ.ಬಿ. ರಸ್ತೆಯಲ್ಲಿರುವ ಶ್ರೀ ಶ್ರೀಶೈಲ ಮಠದಲ್ಲಿ ಇಂದು ಬೆಳಿಗ್ಗೆ 8.30ಕ್ಕೆ ಹಮ್ಮಿಕೊಳ್ಳಲಾಗಿದೆ.

### ನಾಡಿದ್ದು ರಜತ ಮೂರ್ತಿಗಳ ಮೆರವಣಿಗೆ

ದಿನಾಂಕ 6ರ ಬುಧವಾರ ಬೆಳಿಗ್ಗೆ 8 ಗಂಟೆಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಪೂಜೆ, ಹೂವಿನ ಅಲಂಕಾರ, ದೀಕ್ಷಾ ಕಾರ್ಯಕ್ರಮ ನಡೆಯಲಿದೆ. ನಂತರ ಲಿಂ. ಉಭಯ ಜಗದ್ಗುರುಗಳ ರಜತ ಮೂರ್ತಿಗಳ ಮೆರವಣಿಗೆಯು ನಗರದ ರಾಜಬೀದಿಗಳಲ್ಲಿ ಸಂಚರಿಸಲಿದೆ.

ಕಾರ್ಯಕ್ರಮದ ವಿವರಕ್ಕಾಗಿ ಶ್ರೀಶೈಲ ಮಠದ ವ್ಯವಸ್ಥಾಪಕರಾದ ಎಂ. ಬನ್ನಯ್ಯ (99869-22077) ಅವರನ್ನು ಸಂಪರ್ಕಿಸಬಹುದು.

## ರಾಜ್ಯ ಪ್ರಶಸ್ತಿ ಪುರಸ್ಕೃತರಿಗೆ ಶಾಲಾ ಶಿಕ್ಷಕರಿಂದ ಸನ್ಮಾನ



ದಾವಣಗೆರೆ, ನ.3- ಸೂರ್ಯ ಫೌಂಡೇಶನ್ ಹಾಗೂ ಸ್ಪಾರ್ಕ್ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ ವತಿಯಿಂದ ಬೆಂಗಳೂರಿನ ಚಿಕ್ಕಬಾಣಾವರದ ಹುರುಳಿ ಚಿಕ್ಕನಹಳ್ಳಿಯ ಇಂಡೋಗ್ಲೋಬ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಸಭಾಭವನದಲ್ಲಿ ಕಳೆದ ವಾರ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಶೈಕ್ಷಣಿಕ ಸಮಾರಂಭದಲ್ಲಿ, ದಕ್ಷಿಣ ವಲಯದ ಎಲ್ಲಮ್ಮ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಸಹ ಶಿಕ್ಷಕಿ ಶ್ರೀಮತಿ ಮಂಜುಳಾ ಎಸ್. ಪಾಟೀಲ್ ಅವರಿಗೆ ಗುರುಭೂಷಣ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪುರಸ್ಕೃತರಿಗೆ ಉರ್ದು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಶಗುಪ್ತ ಯಾಸ್ಮಿನ್ ಹಾಗೂ ಎಲ್ಲಮ್ಮ ನಗರ ಶಾಲೆಯ ಬಡ್ತಿ ಮುಖ್ಯ ಶಿಕ್ಷಕರಾದ ಶ್ರೀಮತಿ ಇಶ್ರತ್ ಸುಲ್ತಾನ ಹಾಗೂ ಶಾಲಾ ಶಿಕ್ಷಕ ವೃಂದದವರು ಶಾಲೆಯ ಪರವಾಗಿ ಮಂಜುಳಾ ಅವರನ್ನು ಸನ್ಮಾನಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಅನೇಕ ನಾವೀನ್ಯ ಚಟುವಟಿಕೆಗಳನ್ನು ಅಳವಡಿಸಿಕೊಂಡು ಶಾಲೆಯಲ್ಲಿ ಮಕ್ಕಳಿಗೆ ವಿಶಿಷ್ಟವಾಗಿ ಬೋಧನೆ ಮಾಡುತ್ತಿರುವ ರಾಜ್ಯ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಮಂಜುಳಾ ಅವರು ಸಂಗೀತ, ನಾಟಕ, ನೃತ್ಯ, ಕ್ರೀಡೆ ಹೀಗೆ ವಿವಿಧ ಕಲೆಗಳಲ್ಲಿ ಪಾರಂಗತರಾಗಿರುವ ಅವರು ರಾಜ್ಯ ಮಟ್ಟದವರೆಗೂ ಪ್ರದರ್ಶನ ನೀಡಿದ್ದಾರೆ. ಮಕ್ಕಳ ಸರ್ವತೋಮುಖ ಬೆಳವಣಿಗೆ ಹಾಗೂ ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಶಾಲೆಯ ಮುಖ್ಯ ಶಿಕ್ಷಕರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾದ ಗದಿಗೆಪ್ಪ, ಕರಿಬಸಪ್ಪ, ಸಾವಿತ್ರಿಬಾಯಿ ಫುಲೆ ಸಂಘದ ಜಿಲ್ಲಾ ಅಧ್ಯಕ್ಷರಾದ ಕಲ್ಪನಾ, ನಾಜಿಮಾ ಖಾನಂ, ಸೈರಾಬಾನು, ಶಾಯಿನ ಪರ್ವೀನ್, ಮಹಬೂಬ್ ಖಾನ್ ಮತ್ತು ಇತರರು ಉಪಸ್ಥಿತರಿದ್ದರು.



### ಪಪ್ಪಾಯಿ ಹಣ್ಣಿನಲ್ಲಿ ದೀಪದ ಆಕೃತಿ

ದಾವಣಗೆರೆ, ನ.3- ಸ್ಥಳೀಯ ಜಯನಗರ ಬಿ ಬ್ಲಾಕ್‌ನಲ್ಲಿರುವ ಶ್ರೀಮತಿ ಸುಶೀಲಾ ಶಿವಮೂರ್ತಿ ಅವರು ದೀಪಾವಳಿ ಹಬ್ಬದ ಪೂಜೆಗೆಂದು ತಂದಿದ್ದ ಪಪ್ಪಾಯ ಹಣ್ಣಿನ ಒಳಗಡೆ ಕಂಡು ಬಂದ ದೀಪದ ಆಕೃತಿ.

## ಭೂ ಕಬಳಿಕೆ ವಿವಾದ: ಸಚಿವ ಜಮೀರ್ ಅಹಮದ್ ಸಂಪುಟದಿಂದ ವಜಾಗೊಳಿಸಲು ಬಿಜೆಪಿ ಆಗ್ರಹ

ದಾವಣಗೆರೆ, ನ. 3- ಹಿಂದುಗಳಿಗೆ ಸೇರಿದ ಜಮೀನು, ಮಠ ಮಾನ್ಯಗಳ, ದೇವಸ್ಥಾನಗಳ ಮತ್ತು ಪರಿಶಿಷ್ಟರ ಜಮೀನನ್ನು ವಕ್ಫ್‌ಬೋರ್ಡ್‌ಗೆ ಸ್ವಾಧೀನಪಡಿಸಿಕೊಳ್ಳಲು ಹವಣಿಸುತ್ತಿದ್ದು, ಕೋಮುವಾದಕ್ಕೆ ಪ್ರಚೋದನೆ ನೀಡುತ್ತಿರುವ ಸಚಿವ ಜಮೀರ್ ಅಹಮದ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಒತ್ತಾಯಿಸಿದರು.

ಇಂದಿಲ್ಲಿ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆ ಪ್ರಕರಣದ ರುವಾರಿಯಾಗಿದ್ದ ಸಚಿವ ಜಮೀರ್ ಅಹಮದ್ ಅವರು ಸೂಪರ್ ಸಿಎಂ ರೀತಿ ವರ್ತಿಸುತ್ತಿದ್ದಾರೆ ಎಂದು ಕಿಡಿ ಕಾರಿದರು.

1954 ರಲ್ಲಿ ಅಂದಿನ ಪ್ರಧಾನಿಯಾಗಿದ್ದ ಜವಾಹರ್ ಲಾಲ್ ನೆಹರು ಅವರು ವಕ್ಫ್ ಮಂಡಳಿ ಜಾರಿಗೆ ತಂದರು. ಪಿ.ವಿ. ನರಸಿಂಹರಾವ್ ಮಾರ್ಪಾಡು ಮಾಡಿ 1992 ರಲ್ಲಿ ಅನುಷ್ಠಾನಗೊಳಿಸಿದರು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ತಿದ್ದುಪಡಿ ಮಾಡಿದರು. ಹೀಗೆ ಅಲ್ಪಸಂಖ್ಯಾತರ ಮತಗಳ ತುಷ್ಟೀಕರಣಕ್ಕಾಗಿ ನಿರ್ಮಾಣಗೊಂಡಿರುವ ವಕ್ಫ್ ಬೋರ್ಡ್ ದೇಶ ಹಾಗೂ ರಾಜ್ಯಕ್ಕೆ ಮಾರಕವಾಗಿದೆ ಎಂದು ದೂರಿದರು.

ದೇವಸ್ಥಾನ, ಮಠಮಾನ್ಯ, ಪರಿಶಿಷ್ಟರ ಮತ್ತು ಹಿಂದುಳಿದವರ ಜಮೀನನ್ನು ವಕ್ಫ್‌ಬೋರ್ಡ್ ಗೆ ಸ್ವಾಧೀನಪಡಿಸಿಕೊಂಡು ಅಲ್ಪಸಂಖ್ಯಾತರ ಮತಗಳ ತುಷ್ಟೀಕರಣಕ್ಕೆ ಮುಂದಾಗಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರಾಜ್ಯಾದ್ಯಂತ ಹೋರಾಟಕ್ಕೆ ಕರೆಕೊಟ್ಟ ಹಿನ್ನೆಲೆಯಲ್ಲಿ ಮತ್ತು ಮೂರು ಉಪ ಚುನಾವಣೆಯ ಮೇಲೆ ಪರಿಣಾಮ ಬೀರಲಿರುವ ಕಾರಣ ಹೆದರಿಕೊಂಡು ಸಿಎಂ ರೈತರಿಗೆ ನೀಡಿರುವ ನೋಟಿಸ್ ಹಿಂಪಡೆಯಲು ಸೂಚನೆ ನೀಡಿದ್ದಾರೆಂದು ತಿಳಿಸಿದರು.

ಸಿಎಂ ನೋಟಿಸ್ ವಾಪಸ್ ಪಡೆಯಲು ಕೇವಲ ಮೌಖಿಕ ಸೂಚನೆ ನೀಡಿದ್ದು, ಈಗಾಗಲೇ ವಕ್ಫ್ ಬೋರ್ಡ್‌ಗೆ ಬೆಲೆ ಬಾಳುವ ಜಮೀನು ಸೇರ್ಪಡೆಯಾದ ಬಗ್ಗೆ ಮಾತನಾಡಿಲ್ಲ. ಇದನ್ನು ಬಿಜೆಪಿ ಒಪ್ಪುವುದಿಲ್ಲ. ಕಲಂ 11 ರಲ್ಲಿ ನಮೂದಾಗಿರುವುದನ್ನು ಸಂಪೂರ್ಣ ರದ್ದು ಮಾಡಬೇಕು. ಅಲ್ಲಿಯವರೆಗೂ ನಾವು ಹೋರಾಟ ಮುಂದುವರೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಮಠಮಾನ್ಯ, ದೇವಸ್ಥಾನ, ರೈತರ ಜಮೀನುಗಳನ್ನು ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರಿಗೆ ಸೇರಿದ ಭೂಮಿಯನ್ನು ಅಲ್ಪಸಂಖ್ಯಾತ ಅಧಿಕಾರಿಗಳು, ಕಾಂಗ್ರೆಸ್ ಪಕ್ಷದ ಕೆಲವು ರಾಜಕಾರಣಿಗಳು ವಕ್ಫ್‌ಬೋರ್ಡ್ ಗೆ ಹಸ್ತಾಂತರ ಮಾಡುತ್ತಿದ್ದಾರೆಂದು ಆರೋಪಿಸಿದರು.

ವಕ್ಫ್‌ಬೋರ್ಡ್ ಹಿಂದೂಗಳ ಜಮೀನನ್ನು ಕಬಳಿಸುವ ಸಂಚು ನಡೆಸಿದ್ದು, ಮಠಾಧೀಶರು ಕೂಡ ಪತ್ರಚಳವಳಿ ಮಾಡಿ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕೆಂದು ರೇಣುಕಾಚಾರ್ಯ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣೇಶ್, ಮಾಡಾಳು ಮಲ್ಲಿಕಾರ್ಜುನ್, ಅರವಿಂದ್, ಬಿ.ಎಂ. ಸತೀಶ್ ಉಪಸ್ಥಿತರಿದ್ದರು.

### ಇಂದು ಬಿಜೆಪಿ ಪ್ರತಿಭಟನೆ

ವಕ್ಫ್ ಭೂ ಕಬಳಿಕೆ ವಿರುದ್ಧ ಬಿಜೆಪಿ ನಾಳೆ ದಿನಾಂಕ 4 ರಿಂದ ನಿರಂತರ ಹೋರಾಟ ನಡೆಸಲಾಗುತ್ತಿದ್ದು, ಸಂತ್ರಸ್ತರಿಗೆ ಬಿಜೆಪಿಯಿಂದ ಕಾನೂನು ಹೋರಾಟಕ್ಕೆ ಬೇಕಾದ ನೆರವನ್ನು ಸಹ ನೀಡಲಾಗುವುದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಬಿಜೆಪಿ ಕಚೇರಿಯಿಂದ ಉಪವಿಭಾಗಾಧಿಕಾರಿ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಲಾಗುವುದು ಎಂದರು.

**ಪಹಣಿ ಪರಿಶೀಲನಾ ಅಭಿಯಾನ:** ಬಿಜೆಪಿಯಿಂದ ರೈತರಿಗೆ ಅನುಕೂಲವಾಗಲೆಂದು ಪಹಣಿ ಪರಿಶೀಲನಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ರೈತರು ಪಹಣಿ ಪರಿಶೀಲನೆ ಮಾಡಿಕೊಳ್ಳಲು 98450 95092 ಗೆ ಸಂಪರ್ಕಿಸುವಂತೆ ಕೋರಿದರು.

## ಹೊನ್ನಾಳಿಯಲ್ಲಿ ಇಂದು ಬಿಜೆಪಿಯಿಂದ ಪ್ರತಿಭಟನೆ

ಹೊನ್ನಾಳಿ, ನ.3- ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನಲ್ಲೂ ರೈತರ ಪಲವತ್ತಾದ ಕೃಷಿ ಭೂಮಿ, ಹಿಂದುಗಳ ಸ್ಮಶಾನ, ದೇವಸ್ಥಾನ ಜಾಗ, ಕಂದಾಯ, ಗೋಮಾಳ ಜಾಗವನ್ನು ವಕ್ಫ್ ಬೋರ್ಡ ಹೆಸರಿಗೆ ಮಾಡಿಕೊಳ್ಳುತ್ತಿರುವ ಕ್ರಮವನ್ನು ವಿರೋಧಿಸಿ ನಾಳೆ ದಿನಾಂಕ 4ರ ಸೋಮವಾರ ಬೆಳಗ್ಗೆ 10 ಕ್ಕೆ ಹೊನ್ನಾಳಿ ಯಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಅವರು ತಾಲ್ಲೂಕಿನ ಗಿರಿಜಮ್ಮ ಕೋ ಈರಣ್ಣ ಎಂಬ ಹೆಸರಿನ 11 ಎಕರೆ 38 ಗುಂಟೆ ಜಮೀನು ಸೇರಿದಂತೆ ಅನೇಕ ಸಾರ್ವಜನಿಕರ ಆಸ್ತಿಗಳನ್ನು ವಕ್ಫ್ ಬೋರ್ಡ ಹೆಸರಿಗೆ ಮಾಡಿಕೊಂಡಿರುವ ಬಗ್ಗೆ ಪೂರ್ವಭಾವಿ ಸಭೆಯಲ್ಲಿ ದಾಖಲೆ ಬಗಹಿರಂಗ ಪಡಿಸಿ ಮಾತನಾಡಿ, ಸಂಗೊಳ್ಳಿರಾಯಣ್ಣ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲ್ಲೂಕು ಕಚೇರಿ ಮುತ್ತಿಗೆ ಹಾಕಿ ಹೋರಾಟ ಹಮ್ಮಿಕೊಂಡಿರುವುದಕ್ಕೆ ಹಿಂದೂ ಸಂಘಟನೆಗಳು ಪಾಲ್ಗೊಂಡು ಈ ಹೋರಾಟವನ್ನ ಬೆಂಬಲಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಮಂಡಲದ ಅಧ್ಯಕ್ಷ ಜೆ.ಕೆ.ಸುರೇಶ್, ಬಿಜೆಪಿ ಮುಖಂಡರಾದ ಮಂಜುನಾಥ್, ಶಿವಾನಂದ, ರಮೇಶ್, ಕುಬೇರಪ್ಪ, ರಂಗನಾಥ, ಇಂಚರ ಮಂಜುನಾಥ, ಮಹೇಶ ಹುಡೇದ, ಶ್ರೀಧರ, ನರಸಿಂಹಪ್ಪ ಇನ್ನಿತರರಿದ್ದರು.

## ಮಕ್ಕಳಿಗೆ ಮೊಟ್ಟೆ ಕೊಡಲು ತಾಕೀತು



ದಾವಣಗೆರೆ, ನ. 3 - 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಎಂಬಂತಾಗಿದೆ ಇಲ್ಲಿನ ಮಕ್ಕಳ ಸ್ಥಿತಿ. ಸರ್ಕಾರ ಪ್ರತಿ ದಿನ ಶಾಲಾ ಮಕ್ಕಳಿಗೆ ಮೊಟ್ಟೆ ಕೊಡುವ ಯೋಜನೆಗೆ ಚಾಲನೆ ನೀಡಿದೆ. ಆದರೆ ಇಲ್ಲಿನ ಶಿಕ್ಷಕರು ವಾರಕ್ಕೆ ಮೂರು ದಿನ ಮೊಟ್ಟೆ ಕೊಟ್ಟು ಕೈತೊಳೆದುಕೊಳ್ಳುತ್ತಾರೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡರು.

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಅರಳಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಈಚೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಸಮವಸ್ತ್ರ, ಪಠ್ಯ ಪುಸ್ತಕ, ಬಿಸಿಯೂಟ, ಪ್ರತಿದಿನ ಮೊಟ್ಟೆಯನ್ನು ಸರ್ಕಾರ ಕೊಡುತ್ತಿದೆ ನಿಮಗೆ ಕೊಟ್ಟಿದ್ದಾರೆಯೇ? ಎಂದು ಪ್ರಶ್ನಿಸಿದರು.

ಸಮವಸ್ತ್ರ, ಪಠ್ಯ ಪುಸ್ತಕ ಕೊಟ್ಟಿದ್ದಾರೆ. ನಿತ್ಯ ಬಿಸಿಯೂಟವನ್ನೂ ಕೊಡುತ್ತಿದ್ದಾರೆ. ಆದರೆ ವಾರದಲ್ಲಿ ಮೂರು ದಿನ ಮೊಟ್ಟೆ ಮಾತ್ರ ಕೊಡುತ್ತಾರೆ ಎಂದು ಮಕ್ಕಳು ಶಾಸಕರ ಬಳಿ ಸಮಸ್ಯೆ ಬಿಚ್ಚಿಟ್ಟರು. ಇದರಿಂದ ಕೆಂಡಾಮಂಡಲರಾದ ಶಾಸಕರು, 'ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ' ಎಂಬಂತಾಗಿದೆ ಎಂದು ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡರು.

ಗುಣಮಟ್ಟದ ಬಿಸಿಯೂಟದ ಜೊತೆಗೆ ಪ್ರತಿನಿತ್ಯ ಮಕ್ಕಳಿಗೆ ಮೊಟ್ಟೆ ಕೊಡಬೇಕು. ಯಾವುದೇ ಕಾರಣಕ್ಕೂ ವಾರದಲ್ಲಿ ಮೂರು ದಿನ ಮೊಟ್ಟೆ ಕೊಟ್ಟರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಶಾಸಕರು, ಇದೇ ರೀತಿ ಕ್ಷೇತ್ರದ ಕೆಲವು ಶಾಲೆಗಳಿಂದ ದೂರುಗಳು ಬರುತ್ತಿವೆ. ಸಂಬಂಧಪಟ್ಟ ಮೇಲಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥ ಶಿಕ್ಷಕರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಿದರು.

### ಶಿರಮನಹಳ್ಳಿಯಲ್ಲಿ ಇಂದು ಉದ್ಘಾಟನೆ

ಶಿರಮಗೊಂಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಂಘದ ನೂತನ ವಾಣಿಜ್ಯ ಸಂಕೀರ್ಣ ಕಟ್ಟಡದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11.30 ಕ್ಕೆ ಎಸ್.ಎ ರವೀಂದ್ರನಾಥ್ ನಗರದಲ್ಲಿ ನಡೆಯಲಿದೆ.

ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ವಿಶೇಷ ಗೌರವ ಆಹ್ವಾನಿತರಾಗಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಎ ರವೀಂದ್ರನಾಥ್ ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ ಪಾಲ್ಗೊಳ್ಳಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸುಶೀಲಮ್ಮ ರಾಯಪ್ಪ ರಾಜಪ್ಪ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಿಡಿಸಿಸಿ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ರಾಜ್ಯ ಸಹಕಾರ ಮಾರಾಟ ಮಹಾಮಂಡಲ ನಿಗಮದ ನಿರ್ದೇಶಕ ಜೆ.ಆರ್ ಷಣ್ಮುಖಪ್ಪ, ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತದ ಅಧ್ಯಕ್ಷ ಸಿರಿಗೆರೆ ರಾಜಣ್ಣ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಬಿ.ಕುಮಾರ್ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ಅಂಗ ವೈಕಲ್ಯತೆ ಪಾಪವಲ್ಲ: ಮಹಾವೀರ್ ಮ.ಕರೆಣ್ಣವರ




ದಾವಣಗೆರೆ, ನ.3- ಅಂಗವೈಕಲ್ಯ ಪಾಪವಲ್ಲ, ಬಿಕ್ಕಟ್ಟನ್ನು ಅವಕಾಶಗಳಾಗಿ ಪರಿವರ್ತಿಸುವ ಅವಕಾಶ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ. ಕರಣ್ಣನವರ ಹೇಳಿದರು.

ಬುಧವಾರ ನಗರದ ಸಿಆರ್‌ಸಿ ಆವರಣದಲ್ಲಿ 'ರಾಷ್ಟ್ರದ ಏಳಿಗೆಗಾಗಿ ಸಮಗ್ರತೆಯ ಸಂಸ್ಕೃತಿ' ಎಂಬ ವಿಷಯದೊಂದಿಗೆ ಜಾಗೃತಿ ಸಪ್ತಾಹದ ಅಂಗವಾಗಿ 'ಭ್ರಷ್ಟಾಚಾರ ಮುಕ್ತ ಭಾರತ' ಎಂಬ ವಿಷಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತಾನಾಡಿದರು.

'ಭ್ರಷ್ಟಾಚಾರ ಮುಕ್ತ ಭಾರತ', ಆರ್‌ಪಿಡಬ್ಲ್ಯೂಡಿ ಕಾಯ್ದೆ, ಆರ್‌ಟಿಐ ಕಾಯ್ದೆ, ವಿಕಲಚೇತನರ ಹಕ್ಕುಗಳು ಮತ್ತು ಭಾರತ ಸರ್ಕಾರವು ಒದಗಿಸಿರುವ ನಿಬಂಧನೆಗಳು, ಯೋಜನೆಗಳ ಕುರಿತು ಅರಿವು ಮೂಡಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಜೊತೆಗೆ ವಿಕಲಾಂಗ ವ್ಯಕ್ತಿಗಳಿಗೆ ಒದಗಿಸುವ ಸಿಆರ್‌ಸಿ ಸೇವೆಗಳನ್ನು ನೋಡುವ ಮೂಲಕ ನಾನು ತುಂಬಾ ಸಂತೋಷಗೊಂಡಿದ್ದೇನೆ ಎಂದರು.

ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರ, ಸಿಆರ್‌ಸಿ ನಿರ್ದೇಶಕರಾದ ಮೀನಾಕ್ಷಿ ಮಾತಾನಾಡಿದರು. ಸಹಾಯಕ ಸಸ್ಯ ಆರೈಕೆದಾರರ ವೃತ್ತಿಪರ ತರಬೇತಿ ಕೋರ್ಸ್ ಪೂರ್ಣಗೊಳಿಸಿದ ಸಿಆರ್‌ಸಿ ವಿದ್ಯಾರ್ಥಿಗಳಿಗೆ ಕೋರ್ಸ್ ಪೂರ್ಣಗೊಳಿಸಿದ ಪ್ರಮಾಣಪತ್ರಗಳನ್ನು ವಿತರಿಸಿದರು.

## ದಾವಣಗೆರೆ ಸ್ಮಾರ್ಟ್ ಸಿಟಿ ಕಛೇರಿಯಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ.1- ದಾವಣಗೆರೆ ಸ್ಮಾರ್ಟ್ ಸಿಟಿ ಕಛೇರಿಯಲ್ಲಿ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ಧ್ವಜಾರೋಹಣಗೊಳಿಸುವುದರ ಮೂಲಕ 69ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣ ಮಾಡಿದ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಕರ್ನಾಟಕ ಧ್ವಜದ ಪರಿಚಯ ಹಾಗೂ ಕರ್ನಾಟಕ ರಚನೆಗೊಂಡ ಇತಿಹಾಸ ಹಾಗೂ ಅದಕ್ಕೆ ಕಾರಣೀಭೂತರಾದ ಮಹಾತ್ಮರನ್ನು ನೆನೆದರು. ಈ ಸಂದರ್ಭದಲ್ಲಿ ಮುಖ್ಯ ಹಣಕಾಸು ಅಧಿಕಾರಿ ಹೆಚ್. ಗಿರೀಶ್, ಕಂಪನಿ ಕಾರ್ಯದರ್ಶಿ ಎಂ. ಅರುಣಕುಮಾರ್, ಪ್ರಧಾನ ವ್ಯವಸ್ಥಾಪಕ ಎಸ್.ಎ. ಶಿವರಾಜು ಸೇರಿದಂತೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ದೇಶದ ಏಕತೆ, ಸಮಗ್ರತೆಗಾಗಿ ತ್ಯಾಗ - ಬಲಿದಾನ ಮಾಡಿದ ಇಂದಿರಾಗಾಂಧಿ

### ಇಂದಿರಾ ಗಾಂಧಿಯವರ 40ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಸ್ಮರಣೆ

ದಾವಣಗೆರೆ, ನ.3- ಬ್ಯಾಂಕ್‌ಗಳ ರಾಷ್ಟ್ರೀಕರಣ ಹಾಗೂ ದೇಶದ ಏಕತೆ, ಸಮಗ್ರತೆಗಾಗಿ ತ್ಯಾಗ ಬಲಿದಾನ ಮಾಡಿದವರು, ವಿಶ್ವದಲ್ಲೇ ಉಕ್ಕಿನ ಮಹಿಳೆ ಎಂದು ಪ್ರಸಿದ್ಧರಾಗಿದ್ದ ಇಂದಿರಾಗಾಂಧಿ ಯವರು ತಮ್ಮ ಆಡಳಿತದಲ್ಲಿ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಬಡವರ ಪಾಲಿನ ತಾಯಿಯಾಗಿದ್ದರು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಇಂದಿರಾ ಗಾಂಧಿಯವರ ಸೇವೆಯನ್ನು ಸ್ಮರಿಸಿದರು.

ಜಿಲ್ಲಾ ಕಾಂಗ್ರೆಸ್ ಇನ್‌ಟೆಕ್ ವಿಭಾಗವು ದೇವರಾಜ ಅರಸು ಬಡಾವಣೆಯಲ್ಲಿ ಮೊನ್ನೆ ಏರ್ಪಡಿಸಿದ್ದ ಇಂದಿರಾ ಗಾಂಧಿಯವರ 40ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಇಂದಿರಾ ಗಾಂಧಿಯವರ ಆಡಳಿತ ಶೈಲಿ ಹೇಗಿತ್ತೆಂದರೆ ಅವರು ಯುದ್ಧಭೂಮಿಗೆ ತೆರಳಿ ಸೈನಿಕರನ್ನು ಖುದ್ದಾಗಿ ಹುರುದುಂಬಿಸಿ ಪಾಕಿಸ್ತಾನದ ವಿರುದ್ಧ ಭಾರತಕ್ಕೆ ಗೆಲುವು ತಂದುಕೊಡುವುದರ ಜೊತೆಗೆ ಬಾಂಗ್ಲ ದೇಶದ ಉದಯಕ್ಕೆ ಕಾರಣರಾಗಿ ದ್ದರು. ಭಾರತಕ್ಕೆ ಗೆಲವು ತಂದು ಕೊಟ್ಟಿದ್ದಾಗಿ ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು



ಲೋಕಸಭಾ ಅಧಿವೇಶನದಲ್ಲಿ ಹೊಗಳಿ ಅಭಿನಂದಿಸಿದ್ದರಲ್ಲದೇ ಇಂದಿರಾ ಗಾಂಧಿಯವರನ್ನು ದುರ್ಗಾಂಬಿಕ ದೇವಿಗೆ ಹೋಲಿಕೆ ಮಾಡಿ ಪ್ರಶಂಸಿಸಿದರು ಎಂದು ಬಸವರಾಜ್ ನೆನಪಿಸಿದರು.

ಇಂದಿರಾ ಗಾಂಧಿ ಅವರು ದೇಶ ಆಹಾರ ಸ್ವಾವಲಂಬನೆ ಹೊಂದಲು ಶ್ರಮಿಸಿದ್ದಲ್ಲದೇ ಉಳುವವನೇ ಹೊಲದೊಡೆಯ ಎಂಬ ಕ್ರಾಂತಿಕಾರಕ 'ಭೂ ಸುಧಾರಣೆ ಕಾಯ್ದೆ' ಜಾರಿ ಮಾಡಿ ಅನಿಷ್ಟ ಜೀತ ಪದ್ಧತಿಗೆ ಮುಕ್ತಿ ನೀಡಿ ಬಡವರ ಉದ್ಧಾರಕ್ಕಾಗಿ 20 ಅಂಶಗಳ ಕಾರ್ಯಕ್ರಮ ಜಾರಿಗೊಳಿಸಿದ್ದಲ್ಲದೇ ಬಡತನ ತೊಲಗಿಸಲು ಗರೀಬಿ ಹಟಾವೋ ಕಾರ್ಯಕ್ರಮವನ್ನು ದೇಶಕ್ಕೆ ನೀಡಿದ್ದಲ್ಲದೇ ಅಲ್ಪಸಂಖ್ಯಾತರಿಗಾಗಿ 15 ಅಂಶಗಳ ಕಾರ್ಯಕ್ರಮ ಘೋಷಣೆ ಮಾಡಿದ್ದರು.

ನೆರೆಯ ರಾಷ್ಟ್ರ ಪಾಕಿಸ್ತಾನದ ಉಪಟಳ ಜಾಸ್ತಿ ಆದಾಗ ಯುದ್ಧ ಭೂಮಿಗೆ ತೆರಳಿ ಭಾರತೀಯ ಸೈನಿಕರನ್ನು ಹುರಿದುಂಬಿಸಿ ಭಾರತಕ್ಕೆ ಜಯವನ್ನು ತಂದು ಕೊಟ್ಟಂತಹ ಉಕ್ಕಿನ ಮಹಿಳೆ ಇಂದಿರಾಗಾಂಧಿ ಎಂದು ಅವರು ಸ್ಮರಿಸಿದರು.

ಇತಿಹಾಸವನ್ನೇ ತಿರುಚುವ ಕೆಲಸವನ್ನು ನರೇಂದ್ರ ಮೋದಿಯವರು ಮಾಡುತ್ತಿದ್ದು, ಇದರ ವಿರುದ್ಧವಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಂಘಟಿತರಾಗಿ ಇಂದಿನ ಯುವ ಪೀಳಿಗೆಗೆ ಕಾಂಗ್ರೆಸ್ ಪಕ್ಷ ನೆಹರು ಕುಟುಂಬದ ತ್ಯಾಗ ಬಲಿದಾನಗಳ ಬಗ್ಗೆ ಮನವರಿಕೆ ಮಾಡಬೇಕೆಂದು ಕೋರಿದರಲ್ಲದೆ ಇಂದಿರಾಜಿಯವರ ಆದರ್ಶಗಳನ್ನು ನಾವು ಪಾಲಿಸಬೇಕು ಎಂದು ಡಿ. ಬಸವರಾಜ್ ಕರೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಇನ್‌ಟೆಕ್‌ವಿಭಾಗದ ಅಧ್ಯಕ್ಷ ಕೆ.ಎಂ. ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಕೊಡಪಾನ ದಾದಾಪೀರ್, ಬಿ. ಹೆಚ್. ಉದಯಕುಮಾರ್, ಡಿ. ಶಿವಕುಮಾರ್, ಸುರೇಶ್ ಬಿ.ಎಸ್., ನವೀನ್ ಕುಮಾರ್, ಕರಿಬಸಪ್ಪ, ರಮೇಶ್ ಚಲುವಾದಿ, ರಿಯಾಜ್, ತಿಪ್ಪೇಸ್ವಾಮಿ, ಮುಬಾರಕ್, ಮೌನೇಶ್, ಈಶ್ವರಪ್ಪ, ಲಕ್ಷ್ಮಣ್, ನಯಾಜ್, ಇಬ್ರಾಹಿಂ, ರವಿ, ಕೆ.ಜಿ. ರಹಮತ್ ವುಲ್ಲಾ ಸೇರಿದಂತೆ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಅಂತರ್ ಕಾಲೇಜು ಜುಡೋ ಪಂದ್ಯಾವಳಿ, ವಿವಿ ತಂಡದ ಆಯ್ಕೆ

ಮಾಸಬ ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಕ್ರೀಡಾ ವಿಭಾಗ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ೨೦೨೪-೨೫ ನೇ ಸಾಲಿನ ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ ಕಾಲೇಜು ಪುರುಷ ಹಾಗೂ ಮಹಿಳೆಯರ ಜುಡೋ ಪಂದ್ಯಾವಳಿ ಮತ್ತು ವಿವಿ ತಂಡದ ಆಯ್ಕೆ ಕಾರ್ಯಕ್ರಮವು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಯುವ ಮುಖಂಡ ಸಮರ್ಥ್ ಶಾಮನೂರು ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ದಾವಿವಿ ಶಿಕ್ಷಣ ನಿಕಾಯ ಮುಖ್ಯಸ್ಥ ಡಾ. ಕೆ ವೆಂಕಟೇಶ್, ದಾವಿವಿ ದೈಹಿಕ ಶಿಕ್ಷಕ ನಿರ್ದೇಶಕರ ಸಂಘದ ಅಧ್ಯಕ್ಷ ಡಾ. ಸಿ. ಶಂಕರಪ್ಪ, ಸಂಘದ ಮಹಿಳಾ ಉಪಾಧ್ಯಕ್ಷರಾದ ಡಾ. ಎಂ. ಆರ್. ರೇಖಾ, ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಇಂದುಧರ್ ನಿಶಾನಿಮಠ್, ಕಾರ್ಯದರ್ಶಿ ಈ. ಬಸವರಾಜ್ ಪಾಲ್ಗೊಳ್ಳಲಿದ್ದಾರೆ. ದಾವಿವಿ ಕ್ರೀಡಾಧಿಕಾರಿ ಡಾ.ಬಿ. ಹೆಚ್. ವೀರಪ್ಪ, ಐಕ್ಯೂಎಸ್‌ಸಿ ಸಂಚಾಲಕ ಡಾ. ವಿಜಯಕುಮಾರ್, ಕ್ರೀಡಾ ಸಂಚಾಲಕ ಪ್ರವೀಣ್ ಕುಮಾರ್, ಕ್ರೀಡಾ ಸದಸ್ಯ ಡಾ.ಎಂ. ಅಂಜನಪ್ಪ, ಡಾ. ಆರ್. ರಾಘವೇಂದ್ರ, ಡಾ. ಪ್ರಶಾಂತ್ ಉಪಸ್ಥಿತರಿರಲಿದ್ದು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಿ.ಸಿ. ನೀಲಾಂಬಿಕ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಇಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಆರ್.ಎಲ್. ಲಾ ಕಾಲೇಜಿನ ಪ್ರಾಂಶುಪಾಲರಾದ ಜಿ.ಎಸ್. ಯತೀಶ್ ಬಹುಮಾನ ವಿತರಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ಕೆ ವೆಂಕಟೇಶ್, ಬಸವರಾಜು ವಿ. ದಮ್ಮನಹಳ್ಳಿ, ಇಂದೂಧರ ನಿಶಾನಿಮಠ, ಈ. ಬಸವರಾಜ್ ಪಾಲ್ಗೊಳ್ಳಲಿದ್ದಾರೆ. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಟಿ. ಆರ್. ರಂಗಸ್ವಾಮಿ ಉಪಸ್ಥಿತರಿರಲಿದ್ದು, ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜೆ.ಸಿ. ನೀಲಾಂಬಿಕ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

## ನಾಳೆ ದಿವ್ಯಾಂಗರ ವೈದ್ಯಕೀಯ ತಪಾಸಣೆ

ದಾವಣಗೆರೆ, ನ.3- ಶಾಲಾ ಸಾಕ್ಷರತಾ ಹಾಗೂ ಶಿಕ್ಷಣ ಇಲಾಖೆ ವತಿಯಿಂದ ನಾಡಿದ್ದು ದಿನಾಂಕ 5ರ ಬೆಳಿಗ್ಗೆ 9.30ಕ್ಕೆ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ವಿಕಲ ಚೇತನ ಮಕ್ಕಳ ವೈದ್ಯಕೀಯ ತಪಾಸಣೆ ಮತ್ತು ಸಾಧನ ಸಲಕರಣೆಗಳ ಮೌಲ್ಯಾಂಕನ ಶಿಬಿರ ನಡೆಯಲಿದೆ.

ಶಿಬಿರಕ್ಕೆ ಹರಿಹರ ತಾಲ್ಲೂಕು ವ್ಯಾಪ್ತಿಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢ ಶಾಲೆಗಳ 1ರಿಂದ 10ನೇ ತರಗತಿಯ ವಿಕಲ ಚೇತನ ಮಕ್ಕಳನ್ನು ಶಿಬಿರಕ್ಕೆ ಕರೆ ತರುವ ಮೂಲಕ ಶಿಬಿರದ ಸದುಪಯೋಗ ಪಡಿಸಿ ಕೊಳ್ಳುವಂತೆ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೊಟ್ರೇಶ್ ತಿಳಿಸಿದ್ದಾರೆ.

**ಬೈಕ್ ಶೋ ರೂಂ ಮಾರಾಟಕ್ಕಿದೆ**

ದಾವಣಗರೆ ಜಿಲ್ಲೆ ಚನ್ನಗಿರಿ ತಾಲ್ಲೂಕು, ತ್ಯಾವಣಗಿಯಲ್ಲಿರುವ **ಚನ್ನಬಸವೇಶ್ವರ ಹೋಂಡಾ ಶೋ ರೂಂನಲ್ಲಿ** ಕಂಪನಿಗೆ ಅನುಗುಣವಾಗಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಮೆಕ್ಯಾನಿಕ್‌ಗಳು, ಸೇಲ್ಸ್ ಏಜೆಂಟರು ಮತ್ತು ಹೆಲ್ಪರ್ಸ್ ಹೊಂದಿರುವ ಶೋ ರೂಂ ಮಾರಾಟಕ್ಕೆ ಇದೆ.

ಆಸಕ್ತಿ ಇರುವವರು ಮೊ. : **99644 37012**ಗೆ ಸಂಪರ್ಕಿಸಿ.

**ಶೋ ರೂಂನ ಮಾಹಿತಿ ತಿಳಿದುಕೊಳ್ಳಿ.**

ಸ್ಥಳ : ತ್ಯಾವಣಗಿ ತಾ।। ಚನ್ನಗಿರಿ, ಜಿ.।। ದಾವಣಗೆರೆ

**ಮೊದಲನೇ ವರ್ಷದ ಪುಣ್ಯ ಸ್ಮರಣೆ**



**ದಿ. ಶ್ರೀ ಯರಗುಂಟೆ ಮಂಜಣ್ಣ**

(ಸೊಸೈಟಿ ಮಂಜಣ್ಣ)

ನಿಧನ : 3.11.2023

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆಯಿತು.*
*ಸದಾ ನಿಮ್ಮ ಸ್ಮರಣೆಯಲ್ಲಿರುವ..*

ಪತ್ನಿ: ಶ್ರೀಮತಿ ಲಲಿತಮ್ಮ,
ಮಕ್ಕಳಾದ : ಶ್ರೀಮತಿ ಗೀತಾ ಶ್ರೀ ವಿಜಯಕುಮಾರ್,
ಶ್ರೀಮತಿ ಆಶಾ ಶ್ರೀ ಬಸವರಾಜ್ ಬಿ.ಎಂ.,
ಶ್ರೀಮತಿ ರೂಪಾ ಶ್ರೀ ಉಮೇಶ ಬಿ.ಎಂ. ಮತ್ತು
ಮೊಮ್ಮಕ್ಕಳಾದ : ಶರಣ್, ಕರಣ್, ಅಪೇಕ್ಷಾ, ಅಂಕಿತ, ಸಂಕೇತ್, ಸಾತ್ವಿಕ್
ಯರಗುಂಟೆ ಮತ್ತು ಬೂದಿಹಾಳ್ ವಂಶಸ್ಥರು.

## ಬಿ.ಇಡಿ ಕೋರ್ಸ್‌ಗೆ ಅರ್ಜಿ ಆಹ್ವಾನ

ದಾವಣಗೆರೆ, ಅ. 28 - ಪ್ರಸಕ್ತ ಸಾಲಿನ 2 ವರ್ಷದ ಬಿ.ಇಡಿ ಕೋರ್ಸ್‌ಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ನವೆಂಬರ್ 14 ಅರ್ಜಿ ಸಲ್ಲಿಸಲು ಕೊನೆಯ ದಿನ.

ಹೆಚ್ಚಿನ ಮಾಹಿತಿಗಾಗಿ ಡಯಟ್ ಹಿರಿಯ ಉಪನ್ಯಾಸಕ ಮಹಮ್ಮದ್ ಅಯೂಬ್ ಸೊರಬ್ (9164489972), ಡಯಟ್ ಶಿಕ್ಷಕಿ ಶಾಂತಾ ಮುಧೋಳ್ (9844401092), ಕಚೇರಿಯ ದೂ. ಸಂ. 08192 -231156 ಯನ್ನು ಸಂಪರ್ಕಿಸಲು ಡಯಟ್ ಪ್ರಾಚಾರ್ಯರಾದ ಗೀತಾ ತಿಳಿಸಿದ್ದಾರೆ. ಅರ್ಜಿಯನ್ನು ಇಲಾಖಾ ವೆಬ್‌ಸೈಟ್ https://Schooleducation.karnataka.gov.in/ನಲ್ಲಿ ಪ್ರಕಟಿಸಲಾಗಿದೆ.

## ಮಲೇಬೆನ್ನೂರಿಗೆ ಮಾಧುಸ್ವಾಮಿ, ಸೊಗಡು ಶಿವಣ್ಣ

ಪಟ್ಟಣದ ನಂದಿಗುಡಿ ರಸ್ತೆಯ ಶ್ರೀನಂದಿ ಸೌಹಾರ್ದ ಸಹಕಾರಿ ಸಂಘದ ಕಟ್ಟಡದ ಹಿಂಭಾಗದ ನಿವೇಶನದಲ್ಲಿ ವಸತಿ ಗೃಹಗಳ ನಿರ್ಮಾಣಕ್ಕೆ ಇಂದು ಬೆಳಿಗ್ಗೆ 10:30 ಕ್ಕೆ ಭೂಮಿ ಪೂಜೆ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ಜಿಗಳಿಯ ಗೌಡ್ರ ಬಸವರಾಜಪ್ಪ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವರುಗಳಾದ ಜೆ.ಸಿ. ಮಾಧುಸ್ವಾಮಿ ಹಾಗೂ ಸೊಗಡು ಶಿವಣ್ಣ ಅವರು ಭಾಗವಹಿಸಲಿದ್ದಾರೆಂದು ಸಂಘದ ನಿರ್ದೇಶಕ ಜಿಗಳಿಯ ಇಂದೂಧರ್ ಎನ್. ರುದ್ರಗೌಡ ತಿಳಿಸಿದ್ದಾರೆ.

SSIMS SPARSH Centre for Accidents Bone & Joint Care

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

**ಪ್ರತೀ ಹದಿನೈದು ದಿನಗಳಿಗೊಮ್ಮೆ**

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಶುಕ್ರವಾರ, 7ನೇ ನವೆಂಬರ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



**ಭಾವಪೂರ್ಣ ಶ್ರದ್ಧಾಂಜಲಿ**

ಶ್ರೀ ಹಾಲಕೆರೆ ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್ ಟ್ರಸ್ಟಿಗಳೂ, ಹಿರಿಯ ಪತ್ರಕರ್ತರೂ, 'ಇಂದಿನ ಸುದ್ದಿ' ಸಂಪಾದಕರೂ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷರೂ, ವಿವಿಧ ಸಂಘ-ಸಂಸ್ಥೆಗಳ ಸಕ್ರಿಯ ಪದಾಧಿಕಾರಿಗಳೂ, ಅಪಾರ ದೈವ ಭಕ್ತರೂ ಆಗಿದ್ದ

**ಶ್ರೀ ವೀರಪ್ಪ ಎಂ. ಭಾವಿ**

ಅವರು ದಿನಾಂಕ 02.11.2024ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

- ಅಥಣಿ ಎಸ್. ವೀರಣ್ಣ, ಅಧ್ಯಕ್ಷರು • ಎನ್. ಅಡಿವೆಪ್ಪ, ಕಾರ್ಯದರ್ಶಿ
- ಎನ್.ಎ. ಗಿರೀಶ್, ಖಜಾಂಚಿ ಮತ್ತು ಪದಾಧಿಕಾರಿಗಳು ಹಾಗೂ ಸದ್ಭಕ್ತರು

**ಶ್ರೀ ಹಾಲಕೆರೆ ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್ (ರಿ.)**

ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, ದಾವಣಗೆರೆ.

**ಸಮ್ಯಕ್ ಟೈಲ್ಸ್ ಅಂಡ್ ಗ್ರಾನೈಟ್ಸ್**

**SAMYAK TILES & GRANITES**

Samyak

When your choice is best of best

ರಾಣೆಬೆನ್ನೂರಿನಲ್ಲಿ ಇಂದು ವೈಭವದ ಶುಭಾರಂಭ

Latest Range
Premium Products
3000 Plus varieties
10,000sq feet showroom

**THE BIGGEST TILE** Showroom
Tiles & Granites

Top Brands we deal
SOMANY, LV, METRO, LUTON, ITACA, GruppoNueva, CLAYART, CARYSIL, ENDURA, Casa, ITALAKE, KERAKOLL, ACCORD, MYK




SAMYAK TILES & GRANITES : P.B.Road, RANIBENNUR - 581115 Mobile : 9741499083, 6363775838
SAMYAK CERAMICS & GRANITES : Hadadi Road, Near Vani Rice Mill, DAVANGERE - 577005 Mobile : 80884 80339

**ಅನುಗ್ರಹ ಹಾಸ್ಪಿಟಲ್** ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ

ಫೋ. : 08192 222292, 90368 82045

**Specialist Doctors Available at Anugraha Hospital**

**ನಿಮಗೆ ಈ ಕೆಳಕಂಡ ಸಂಧಿವಾತದ ಲಕ್ಷಣಗಳಿವೆಯೇ ?**





- ಕೈ ಕಾಲು ಗಂಟುಗಳಲ್ಲಿ ನೋವು ಮತ್ತು ಬಾವು ಇದೆಯೇ ?
- ನಿಮ್ಮ ಕೈ ಮತ್ತು ಕಾಲುಗಳ ಗಂಟುಗಳಲ್ಲಿ ವಿರೂಪ (Deformities)ಇದೆಯೇ ?
- ಬೆಳಿಗ್ಗೆ ಎದ್ದಾಗ ಸೊಂಟ ನೋವು ಮತ್ತು ಕತ್ತು ನೋವು ಇದೆಯೇ ?
- ಬೆನ್ನು ನೋವು ಮತ್ತು ಸೊಂಟ ನೋವಿನ ಜೊತೆಗೆ ಕಣ್ಣು ಕೆಂಪಾಗಿ ನೋಯುವುದೇ, ಅಥವಾ ಮಂಜಾಗಿ ಕಾಣುವುದೇ ?
- ಗಂಟು ನೋವಿನ ಕಾಯಿಲೆ ಇದನ್ನು ಪ್ರಾಥಮಿಕ ಹಂತದಲ್ಲಿಯೇ ಕಂಡು ಹಿಡಿದರೆ ನಿಯಂತ್ರಿಸಬಹುದು. ವಿರೂಪ (Deformities) ಆದವರಿಗೆ ಮುಂದೆ ಆಗುವ ತೊಂದರೆಯನ್ನು ತಡೆಯಬಹುದು.

✓ RHEUMATOID ARTHRITIS ✓ ANKYLOSING SPONDYLITIS
✓ GOUT ✓ PSORATIC ARTHRITIS ✓ SLE

ಈ ಮೇಲ್ಕಂಡ ಲಕ್ಷಣಗಳ ಯಾವುದೇ ತೊಂದರೆ ಇದ್ದಲ್ಲಿ

ಡಾ. ಸೋಮಶೇಖರ್ (Rheumatologist) ಇವರು

ನವೆಂಬರ್ 06 ಬುಧವಾರ ಮತ್ತು ನವೆಂಬರ್ 07 ಗುರುವಾರ 2024




ನಿಮಗೇನಾದರೂ ಕೆಳಕಂಡ ಅವಶ್ಯಕತೆಗಳಿದ್ದರೆ ಅಂತರಾಷ್ಟ್ರೀಯ ಮೂಳೆ ಮತ್ತು ಕೀಲು ರೋಗ ಕೇಂದ್ರಗಳಲ್ಲಿ ತರಬೇತಿ ಪಡೆದ ತಜ್ಞರನ್ನು ಭೇಟಿ ಮಾಡಿ

- ಸೊಂಟ, ಮೊಣಕಾಲು, ಕೀಲು ನೋವುಗಳು
- ನಡೆದಾಡಲು ಕಷ್ಟವಾಗುತ್ತಿದ್ದರೆ
- ರೊಬೋಟಿಕ್ ಕೀಲು ಬದಲಿ ಶಸ್ತ್ರಚಿಕಿತ್ಸೆ
- ಕೀ ಹೋಲ್ ಮೂಳೆ ಶಸ್ತ್ರಚಿಕಿತ್ಸೆಗಳು

**ಡಾ।। ರಾಜಶೇಖರ್ ಕೆ.ಟಿ.**
MBBS, MS (Ortho), MCh (Ortho)
Senior Joint replacement Surgeon

Ranawat Fellow in Joint Replacement Surgery - New York, USA
Fellowship in Joint Replacement Surgery, Computer Assisted Surgery & Pelvi - Acetabular Fractures, Mumbai

ನವೆಂಬರ್ 11 ಸೋಮವಾರ 2024

**Dr Kartik Kumbar**
MS (Ortho), MCh (Neurosurgery CMC Vellore)
Consultant, Neurosurgery Apollo Hospitals, Bengaluru

WHO SHOULD ATTEND?

Brain disorders
- Head Ache • Head Injury
- Brain Tumours
- Stroke • Epilepsy

Spine problems
- Back Pain • Leg Pain
- Neck Pain • Spine Injury
- Spine Deformity

NEUROSURGERY CLINIC

ನವೆಂಬರ್ 14 ಗುರುವಾರ 2024



**Dr Manju Bharath**
MBBS, MS, DNB
(Vascular Surgery)
Consultant Vascular Surgery
Apollo Hospitals, Bengaluru

WHO SHOULD ATTEND?
- Varicose Veins
- Diabetic Foot and Gangrene
- AV Fistula for Dialysis
- Deep Vein Clots
- Blood Clot in Arteries
- Angioplasty
- Laser Treatment for Veins

VASCULAR CLINIC

ನವೆಂಬರ್ 14 ಗುರುವಾರ 2024

**ಹೆಮಟಾಲಜಿ ಕ್ಲಿನಿಕ್**



**ಡಾ. ಮಹೇಶ್ ರಾಜಶೇಖರಯ್ಯ**
MBBS, MD (Internal Medicine), DM (Clinical Haematology),
MRCP (The UK), Fellowship in BMT & Leukemia (Vancouver)
Head of Haematology and Bone Marrow Transplant Department

ಈ ಕೆಳಗಿನ ಕಾಯಿಲೆಗಳಿಂದ ನರಳುತ್ತಿರುವವರು

ಅನೀಮಿಯಾ, ರಕ್ತದ ಹೆಚ್ಚಳ, ಕಡಿಮೆ ಹಾಗು ಅಧಿಕ ಪ್ಲೇಟ್ಲೆಟ್ ಕೌಂಟ್, ಕಡಿಮೆ ಹಾಗು ಅಧಿಕ ಬಿಳಿ ರಕ್ತಕಣಗಳ ಕೌಂಟ್, ಲ್ಯೂಕೇಮಿಯಾ, ಲಿಂಫೋಮ, ಮಲ್ಟಿಪಲ್ ಮೈಲೋಮ, ರಕ್ತಸ್ರಾವ ಮತ್ತು ರಕ್ತ ಹೆಪ್ಪುಗಟ್ಟುವಿಕೆ, ಬೋನ್ ಮ್ಯಾರೋ ಸಮಸ್ಯೆಗಳು, ಬೋನ್ ಮ್ಯಾರೊ ಕಸಿ ಇಮ್ಯುನೋಡಿಫೀಷಿಯನ್ಸಿ ಸಮಸ್ಯೆಗಳು

ಮಕ್ಕಳಲ್ಲಿ ಕಂಡು ಬರುವ ಎಲ್ಲಾ ರೀತಿಯ ಹೆಮಟಾಲಜಿ ಸಮಸ್ಯೆಗಳು (ಥಲಸ್ಸೆಮಿಯಾ ಸೇರಿದಂತೆ), ರಕ್ತಸ್ರಾವದ ಸಮಸ್ಯೆಗಳು, ರಕ್ತಹೆಪ್ಪುಗಟ್ಟುವಿಕೆಯ ಸಮಸ್ಯೆಗಳು, ಇಮ್ಯುನೋಡಿಫಿಷಿಯನ್ಸಿ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ ಪುನರಾವರ್ತಿತ ಗರ್ಭಪಾತ ಸೇರಿದಂತೆ ಗರ್ಭಿಣಿಯರು ಮತ್ತು ಮಹಿಳೆಯರಲ್ಲಿ ಕಂಡುಬರುವ ಎಲ್ಲ ರೀತಿಯ ಹೆಮಟಾಲಜಿ ಸಮಸ್ಯೆಗಳು, ಡಿವಿಟಿ, ಅನೀಮಿಯಾ, ಥ್ರಂಬೊಸೈಟೊಪೆನಿಯಾ, ಪ್ಯೂಬರ್ಟಿ ಮೆನೋರೇಜಿಯಾ, ಮಹಿಳೆಯರಲ್ಲಿ ರಕ್ತಸ್ರಾವದ ಸಮಸ್ಯೆಗಳು, ಲ್ಯಕೇಮಿಯಾ, ಲಿಂಫೋಮಾ, ಎಪಿಎಲ್ ಸಿಂಡ್ರೋಮ್.

ನವೆಂಬರ್ 20 ಬುಧವಾರ 2024

**ಲಿವರ್ ಮತ್ತು ಗ್ಯಾಸ್ಟ್ರೋ ಕ್ಲಿನಿಕ್**

**Dr. Adarsh C K**
Chief Consultant Gastroenterologist,
Hepatologist & Advanced Endoscopist



MBBS, MD
(General Medicine),
DNB(Gastroenterology)

Expertise:
Liver disease & Liver Transplant, Gastroenterology, Hepatology & Advanced Endoscopic Procedures like Enteroscopy, Spyglass, Capsule Endoscopy, ERCP, and Endoscopic Ultrasound.

ನವೆಂಬರ್ 22 ಶುಕ್ರವಾರ 2024

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas